# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಮೇ 10, 2023

ಸಂಪುಟ : 49 ಸಂಚಿಕೆ : 358 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com














# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಮೇ 10, 2023


# ಇಂದು ಮತದಾರ ಪ್ರಭುಗಳಿಂದ ಭವಿಷ್ಯದ ನಿರ್ಧಾರ

ಬೆಂಗಳೂರು, ಮೇ 9- ರಾಷ್ಟ್ರದ ಗಮನ ಸೆಳೆದಿರುವ ಹಾಗೂ ಮುಂದಿನ ಲೋಕಸಭೆ ಚುನಾವಣೆಗೆ ದಿಕ್ಸೂಚಿ ಎಂದೇ ಪರಿಗಣಿಸಲಾಗಿರುವ ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಗೆ ನಾಳೆ ಮತದಾನ ನಡೆಯಲಿದೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೆ ಬೆಳಿಗ್ಗೆ 7ರಿಂದ ಸಂಜೆ ಆರು ಗಂಟೆಯವರೆಗೂ ಮತದಾನ ನಡೆಯಲಿದ್ದು, ಮುಕ್ತ, ನ್ಯಾಯಸಮ್ಮತ ಹಾಗೂ ನಿಷ್ಪಕ್ಷಪಾತ ಮತದಾನಕ್ಕಾಗಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮುಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ, ಜಗದೀಶ್ ಶೆಟ್ಟರ್, ಸಿದ್ಧರಾಮಯ್ಯ ಸೇರಿದಂತೆ 2615 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

ಆಡಳಿತಾರೂಢ ಬಿಜೆಪಿ-224 ಕ್ಷೇತ್ರಗಳಿಗೂ ಸ್ಪರ್ಧೆಗಿಳಿದು, ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುವ ತವಕದಲ್ಲಿದ್ದರೆ, ಪ್ರತಿಪಕ್ಷವಾದ ಕಾಂಗ್ರೆಸ್-223, ಜೆಡಿಎಸ್- 209, ಇತರೆ ರಾಷ್ಟ್ರೀಯ, ನೋಂದಾಯಿತ ಪಕ್ಷಗಳು ಹಾಗೂ ಸ್ವತಂತ್ರ ಅಭ್ಯರ್ಥಿಗಳು ತಮ್ಮ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ರಾಜ್ಯದ ಹದಿನಾರನೇ ವಿಧಾನಸಭಾ ಚುನಾವಣೆಗೆ 224 ಅಭ್ಯರ್ಥಿಗಳನ್ನು ಆಯ್ಕೆ ಮಾಡಲು 5,31,33,054 ಮತದಾರರು ಮತದಾನ ಮಾಡುವ ಹಕ್ಕು ಹೊಂದಿದ್ದಾರೆ.

ಮತದಾನದ ಅನುಕೂಲಕ್ಕಾಗಿ ಚುನಾವಣಾ ಆಯೋಗ ಸಕಲ ರೀತಿಯಲ್ಲೂ ಸಜ್ಜಗೊಂಡಿದೆ. 58,545 ಮತಗಟ್ಟೆಗಳನ್ನು ರಾಜ್ಯದಲ್ಲಿ ತೆರೆದಿದ್ದು, ಪ್ರತಿ ಮತ ಕೇಂದ್ರದಲ್ಲಿ ಸುಮಾರು 900 ಮತದಾರರು ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಮತ ಚಲಾವಣೆ ಸಂದರ್ಭದಲ್ಲಿ ಎಪಿಕ್ ಸೇರಿದಂತೆ ಕೇಂದ್ರ ಇಲ್ಲವೇ ರಾಜ್ಯ ಸರ್ಕಾರ ನೀಡಿರುವ ವಿವಿಧ ಗುರುತಿನ ಚೀಟಿ ಪ್ರದರ್ಶಿಸಿ ಮತ ಚಲಾಯಿಸಬಹುದು. ಮತದಾರರ ಎಡಗೈ ತೋರು ಬೆರಳಿಗೆ ಶಾಯಿ ಹಾಕಲಾಗುತ್ತದೆ.

ನಾಳೆ ನಡೆಯುವ ಮತದಾನದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಜರುಗದಂತೆ ಮುನ್ನೆಚ್ಚರಿಕಾ ಕ್ರಮವಾಗಿ ರಾಜ್ಯ ಪೊಲೀಸ್, ಹೋಂ ಗಾರ್ಡ್, ಅರೆಸೇನಾಪಡೆಯನ್ನು ಆಯೋಗ ನಿಯೋಜಿಸಿದೆ.

ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ (4ನೇ ಪುಟಕ್ಕೆ)






ಮಂಗಳವಾರ ದಾವಣಗೆರೆ ನಗರದ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಅಲ್ಲಿನ ಕಾರ್ಯವೈಖರಿ ಪರಿಶೀಲಿಸಿದರು. ಮತಗಟ್ಟೆಗಳಿಗೆ ತೆರಳುತ್ತಿರುವ ಚುನಾವಣಾ ಸಿಬ್ಬಂದಿ (ಬಲಚಿತ್ರ)

## ಜಿಲ್ಲೆಯಲ್ಲಿ ಮತದಾನಕ್ಕೆ ಸಕಲ ಸಿದ್ಧತೆ

### ಪೊಲೀಸ್ ಭದ್ರತೆಯಲ್ಲಿ 1,685 ಮತಗಟ್ಟೆಗಳಿಗೆ ಮತ ಯಂತ್ರ, ಸಿಬ್ಬಂದಿ ರವಾನೆ

ದಾವಣಗೆರೆ, ಮೇ 9 - ಜಿಲ್ಲೆಯ 14.42 ಲಕ್ಷ ಮತದಾರರು ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಬುಧವಾರ ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ಮಾಡುವ ಮೂಲಕ, ಅಭ್ಯರ್ಥಿಗಳ ಹಣೆಬರಹವನ್ನು ನಿರ್ಧರಿಸಲಿದ್ದಾರೆ.

ಮಂಗಳವಾರದಂದು ಮಸ್ಟರಿಂಗ್ ಕೇಂದ್ರಗಳಿಂದ ಮತ ಯಂತ್ರಗಳು ಹಾಗೂ ಸಂಬಂಧಿಸಿದ ಇತರೆ ಉಪಕರಣಗಳನ್ನು ಅಧಿಕಾರಿಗಳು ತೆಗೆದುಕೊಂಡು ಮತಗಟ್ಟೆಗಳಿಗೆ ರವಾನೆಯಾಗಿದ್ದಾರೆ.

ಮತದಾನದ ಸಿದ್ಧತೆ ಕುರಿತು ಪತ್ರಕರ್ತರೊಂದಿಗೆ ಮಾತನಾಡಿರುವ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜಿಲ್ಲೆಯಲ್ಲಿ 1,685 ಮತಗಟ್ಟೆಗಳಿದ್ದು, 8,050 ಮತಗಟ್ಟೆ ಸಿಬ್ಬಂದಿಯನ್ನು ನೇಮಿಸಲಾಗಿದೆ. ಇವರಿಗೆ ಮೂರು ಹಂತದ ಸಂಪೂರ್ಣ ತರಬೇತಿ ನೀಡಲಾಗಿದೆ ಎಂದರು.

ಎಂ3 ಮಾಡೆಲ್‌ನ ಹೊಸ ಮತ ಯಂತ್ರಗಳು (4ನೇ ಪುಟಕ್ಕೆ)

### ಮತಗಟ್ಟೆಗಳ ಕಡೆ ಸಿಬ್ಬಂದಿ ರವಾನೆ

ಏಳು ವಿಧಾನಸಭಾ ಕ್ಷೇತ್ರಗಳ ಮತಗಟ್ಟೆಗಳಿಗೆ ಮಂಗಳವಾರ ಅಗತ್ಯ ಉಪಕರಣಗಳೊಂದಿಗೆ ಚುನಾವಣಾ ಸಿಬ್ಬಂದಿ ರವಾನೆಯಾಗಿದ್ದಾರೆ.

ದಾವಣಗೆರೆ ನಗರದಲ್ಲಿ ಮೋತಿ ವೀರಪ್ಪ ಪಿ.ಯು. ಕಾಲೇಜಿನಿಂದ ಮಾಯಕೊಂಡ ಕ್ಷೇತ್ರಕ್ಕೆ, ಹೈಸ್ಕೂಲ್ ಮೈದಾನದ ಶಾಲೆಯಿಂದ ದಾವಣಗೆರೆ ದಕ್ಷಿಣ ಹಾಗೂ ಡಿ.ಆರ್.ಆರ್. ಶಾಲೆಯಿಂದ ದಾವಣಗೆರೆ ಉತ್ತರಕ್ಕೆ ಸಿಬ್ಬಂದಿ ರವಾನೆಯಾಗಿದ್ದಾರೆ. (4ನೇ ಪುಟಕ್ಕೆ)

## ಜಿಲ್ಲೆಯ ವಿವಿದೆಡೆ ವಿಶೇಷ ಮತಗಟ್ಟೆಗಳ ಆಕರ್ಷಣೆ

### ಮತದಾರರ ಸೆಳೆಯಲು ಸಖಿ, ವಿಶೇಷಚೇತನ, ಪಾರಂಪರಿಕ, ಯುವ, ವಿಷಯಾಧಾರಿತ ಮತಗಟ್ಟೆ



ದಾವಣಗೆರೆ, ಮೇ 9- ಜಿಲ್ಲೆಯಾದ್ಯಂತ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಇಂದು ಮತದಾನ ನಡೆಯಲಿದ್ದು, ಮತದಾನ ಪ್ರಮಾಣ ಹೆಚ್ಚಿಸಲು ಹಾಗೂ (4ನೇ ಪುಟಕ್ಕೆ)

## ಬೆಳಗ್ಗೆ 7 ರಿಂದ ಸಂಜೆ 6ರವರೆಗೆ ಮತದಾನ

ದಾವಣಗೆರೆ, ಮೇ 9- ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಲಿದೆ.

ಈಗಾಗಲೇ ಎಲ್ಲಾ ಮತಗಟ್ಟೆಗಳಿಗೆ ಮತದಾನ ಸಿಬ್ಬಂದಿಗಳು ತಲುಪಿದ್ದು, ಜಿಲ್ಲೆಯ ಎಲ್ಲಾ 1685 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ. ಮತದಾನದ ವೇಳೆ ಎಡಗೈ ತೋರು ಬೆರಳಿಗೆ ಅಳಿಸಲಾಗದ ಶಾಹಿಯನ್ನು ಹಾಕಲಾಗುತ್ತದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಮತದಾರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ಬಿಎಲ್‌ಓ ಗಳ ಮೂಲಕ ವೋಟರ್ ಸ್ಲಿಪ್‌ಗಳನ್ನು ವಿತರಣೆ ಮಾಡಲಾಗಿದೆ. ಎಲ್ಲಾ ಮತದಾರರು ಯಾವುದೇ ಭಯವಿಲ್ಲದೆ ಮುಕ್ತವಾಗಿ ಮತದಾನ ಮಾಡಲು ಎಲ್ಲಾ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪ್ರತಿ ಮತಗಟ್ಟೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಸ್ಥಾಪಿಸಲಾಗಿದೆ. ನೆರಳಿನ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಇರಲಿದೆ ಎಂದು ಹೇಳಿದರು.

ಜಿಲ್ಲೆಯ 7 ಕ್ಷೇತ್ರಗಳಿಂದ 7,21,964 ಪುರುಷ, 7,20,004 ಮಹಿಳೆಯರು, 118 ಇತರೆ, 467 ಸೇವಾ ಮತದಾರರು ಸೇರಿ 14,42,553 ಮತದಾರರಿದ್ದಾರೆ. 1,685 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಮತಗಟ್ಟೆ 100 ಮೀಟರ್ ಒಳಗೆ ಯಾವುದೇ ಚುನಾವಣಾ ಮತ ಪ್ರಚಾರ ಮಾಡುವಂತಿಲ್ಲ. ಅಭ್ಯರ್ಥಿಗಳು, ಪಕ್ಷದವರು ಮತ ಕೇಂದ್ರದ 200 ಮೀಟರ್ ವ್ಯಾಪ್ತಿ ನಂತರ 1 ಟೇಬಲ್, 2 ಚೇರ್ ಹಾಗೂ 1 ಬ್ಯಾನರ್ 3 ಅಡಿ ಉದ್ದ ಮತ್ತು 1.5 ಅಡಿ ಎತ್ತರ ಇರುವುದನ್ನು ಉಪಯೋಗಿಸಿ ಮತದಾರರ ಪ್ರಚಾರ ಸಹಾಯವಾಣಿ ನಡೆಸಲು ಅವಕಾಶ ಇದೆ. ಮತ್ತು ಇವರು ಕಡ್ಡಾಯವಾಗಿ ಮತದಾರರ ಗುರುತಿನ ಚೀಟಿಯನ್ನು ಇಟ್ಟುಕೊಂಡಿರಬೇಕು, ಇದಕ್ಕೆ ಚುನಾವಣಾಧಿಕಾರಿಯ ಅನುಮತಿ ಕಡ್ಡಾಯವಾಗಿದೆ.

ಮತಗಟ್ಟೆ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಮಾರಕಾಸ್ತ್ರವನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಿದೆ. (4ನೇ ಪುಟಕ್ಕೆ)

## ನೀತಿ ಸಂಹಿತೆ : ಕಳೆದ ಬಾರಿಗಿಂತ 4.5 ಪಟ್ಟು ಹೆಚ್ಚು ಸರಕುಗಳ ವಶ

ನವದೆಹಲಿ, ಮೇ 9 - ಈ ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ 375 ಕೋಟಿ ರೂ.ಗಳಿಗೂ ಹೆಚ್ಚಿನ ಮೌಲ್ಯದ ಮದ್ಯ, ಮಾದಕ ಹಾಗೂ ಉಚಿತ ಕೊಡುಗೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದು ಕಳೆದ ವಿಧಾನಸಭಾ ಚುನಾವಣೆಗಿಂತ 4.5 ಪಟ್ಟು ಹೆಚ್ಚಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ.


ವೆಚ್ಚದ ಮೇಲೆ ಹೆಚ್ಚಿನ ನಿಗಾ ವಹಿಸಿರುವುದರಿಂದ ವಶಪಡಿಸಿಕೊಂಡ ಸರಕುಗಳ ಮೌಲ್ಯ ಹೆಚ್ಚಾಗಿದೆ. ಸೀರೆ, ಆಹಾರದ ಕಿಟ್, ಕುಕ್ಕರ್ ಹಾಗೂ ಅಡುಗೆ ಮನೆ ಉಪಕರಣಗಳೂ ಸೇರಿದಂತೆ ಹಲ ವಾರು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಕಳೆದ ಮಾರ್ಚ್ 29ರಂದು ನೀತಿ ಸಂಹಿತೆ ಜಾರಿಗೆ ತಂದ ನಂತರ ಜಾರಿ ನಿರ್ದೇಶನಾಲಯವು 288 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ವಶಪಡಿಸಿಕೊಂಡಿದೆ. ರಾಜ್ಯದ 81 ವಿಧಾನಸಭಾ ಕ್ಷೇತ್ರಗಳನ್ನು (4ನೇ ಪುಟಕ್ಕೆ)

## ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಂಧನ

ಇಸ್ಲಾಮಾಬಾದ್, ಮೇ 9 – ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಅವರನ್ನು ಬಂಧಿಸಲಾಗಿದೆ. ಇದರ ವಿರುದ್ಧ ಪ್ರತಿಭಟಿಸಿದ ಅವರ ಬೆಂಬಲಿಗರು, ರಾವಲ್‌ಪಿಂಡಿಯಲ್ಲಿರುವ ಸೈನ್ಯದ ಕೇಂದ್ರ ಕಚೇರಿ ಹಾಗೂ ಲಾಹೋರ್‌ನಲ್ಲಿರುವ ಕಮಾಂಡರ್ ನಿವಾಸಕ್ಕೆ ನುಗ್ಗಿದ ಘಟನೆ ನಡೆದಿದೆ.

ಬಯೋಮೆಟ್ರಿಕ್ ಪ್ರಕ್ರಿಯೆಗಾಗಿ ಖಾನ್ ಅವರು ಲಾಹೋರ್‌ನಿಂದ ಇಸ್ಲಾಮಾಬಾದ್ ಹೈಕೋರ್ಟ್‌ಗೆ ಬಂದಿದ್ದರು. ಆಗ ಪಾಕ್ ಸೈನ್ಯದ ರೇಂಜರ್‌ಗಳು ಗಾಜಿನ ಕಿಟಕಿಗಳನ್ನು ಒಡೆದು, ಖಾನ್ ಪರ ವಕೀಲರು ಹಾಗೂ ಭದ್ರತಾ

### ಸೈನ್ಯದ ಕೇಂದ್ರ ಕಚೇರಿಗೆ ನುಗ್ಗಿ ಪ್ರತಿಭಟನೆ



ಸಿಬ್ಬಂದಿಯನ್ನು ಥಳಿಸಿ ಮಾಜಿ ಪ್ರಧಾನಿಯನ್ನು ಬಂಧಿಸಿದ್ದಾರೆ.

ಪಾಕಿಸ್ತಾನ್ ತೆಹರೀಕ್ ಎ ಇನ್ಸಾಫ್ ಪಕ್ಷದ ನಾಯಕರಾಗಿರುವ ಖಾನ್ ಅವರು ಗುಪ್ತಚರ ಸಂಸ್ಥೆಯಾದ ಐ.ಎಸ್.ಐ. ಉನ್ನತ ಅಧಿಕಾರಿಗಳ ವಿರುದ್ಧ ಆಧಾರ ರಹಿತ ಆರೋಪ ಮಾಡಿದ್ದಾರೆ ಎಂದು ಸೈನ್ಯ ಹೇಳಿತ್ತು. ಇದರ ಬೆನ್ನಲ್ಲೇ ಖಾನ್ ಬಂಧಿಸಲಾಗಿದೆ.

ಖಾನ್ ಬಂಧನದ ಸುದ್ದಿ ಹರಡುತ್ತಿದ್ದಂತೆಯೇ ಪಾಕಿಸ್ತಾನದ ಹಲವಾರು ನಗರಗಳಲ್ಲಿ ಪ್ರತಿಭಟನೆಗಳು ಆರಂಭವಾದವು. ಕೆಲವೆಡೆ ಹಿಂಸಾಚಾರ ಸಂಭವಿಸಿವೆ. ಪೊಲೀಸರ ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ ಹಾಗೂ ಸಾರ್ವಜನಿಕ ಆಸ್ತಿಗೆ ಹಾನಿ ಮಾಡಲಾಗಿದೆ.

ಇದೇ ಮೊದಲ ಬಾರಿಗೆ ಖಾನ್ ಬೆಂಬಲಿಗರು ರಾವಲ್‌ಪಿಂಡಿಯಲ್ಲಿರುವ ಸೈನ್ಯದ ಕೇಂದ್ರ ಕಚೇರಿಯ ಗೇಟ್ ಮುರಿದು ಒಳಗೆ ನುಗ್ಗಿದ್ದಾರೆ. ಈ ಸಂದರ್ಭದಲ್ಲಿ ಸೈನ್ಯದ ಸಿಬ್ಬಂದಿ ತಾಳ್ಮೆ ಕಾಯ್ದುಕೊಂಡಿದ್ದಾರೆ. ಪ್ರತಿಭಟನಾಕಾರರು ಸೈನ್ಯದ ವಿರುದ್ಧ (4ನೇ ಪುಟಕ್ಕೆ)

## ಸೇತುವೆ ಮೇಲಿಂದ ಬಸ್ ಬಿದ್ದು 24 ಸಾವು

ಖರ್ಗೋನ್, ಮೇ 9 – ಮಧ್ಯ ಪ್ರದೇಶದ ಖರ್ಗೋನ್ ಜಿಲ್ಲೆಯಲ್ಲಿ ಬಸ್ ಒಂದು ಸೇತುವೆ ಮೇಲಿಂದ ನೀರಿಲ್ಲದ ನದಿಗೆ ಬಿದ್ದು 24 ಜನ ಸಾವನ್ನಪ್ಪಿದ್ದಾರೆ.

ಖಾಸಗಿ ಬಸ್ ವೇಗವಾಗಿ ಸಾಗುತ್ತಿದ್ದಾಗ ಸೇತುವೆಯ ಸರಳುಗಳನ್ನು ಮುರಿದು ಕೆಳಗೆ ಬಿದ್ದಿದೆ. ಖರ್ಗೋನ್‌ನೆಯ ದಸಂಗ ಹಳ್ಳಿಯ ಸೇತುವೆಯಿಂದ ಬಿದ್ದ ಬಸ್‌ನಲ್ಲಿ 40 ಜನರಿದ್ದರು ಎಂದು ಕೃಷಿ ಸಚಿವ ಕಮಲ್ ಪಟೇಲ್ ತಿಳಿಸಿದ್ದಾರೆ.

ಮೃತರ ಕುಟುಂಬಗಳಿಗೆ ತಲಾ 4 ಲಕ್ಷ ರೂ. ಹಾಗೂ ತೀವ್ರವಾಗಿ ಗಾಯಗೊಂಡವರಿಗೆ 50 ಸಾವಿರ ರೂ. ಪರಿಹಾರ ನೀಡುವುದಾಗಿ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.



### ತಂಪು ತಂದ ಮಳೆ

ದಾವಣಗೆರೆ ನಗದಲ್ಲಿ ಮಂಗಳವಾರ ಮಧ್ಯಾಹ್ನ ಸುಮಾರು ಅರ್ಧ ತಾಸು ಸುರಿದ ಮಳೆ ಬಿಸಿಲ ಬೇಗೆಗೆ ತತ್ತರಿಸಿದ್ದ ಜನತೆಗೆ ತಂಪು ನೀಡಿತು.

## ಬ್ರಿಗೇಡಿಯರ್ ಹಂತದ ಅಧಿಕಾರಿಗಳಿಗೆ ಏಕರೂಪದ ಸಮವಸ್ತ್ರ

ನವದೆಹಲಿ, ಮೇ 9 - ಬ್ರಿಗೇಡಿಯರ್ ಹಾಗೂ ಅವರಿಗಿಂತ ಹೆಚ್ಚಿನ ಹಂತದ ಅಧಿಕಾರಿಗಳಿಗೆ ಏಕರೂಪದ ಸಮವಸ್ತ್ರ ಜಾರಿಗೆ ತರಲು ಸೈನ್ಯ ನಿರ್ಧರಿಸಿದೆ. ಆಗಸ್ಟ್ 1ರಿಂದ ಸಮವಸ್ತ್ರ ಜಾರಿಗೆ ಬರಲಿದೆ ಎಂದು ಸೈನ್ಯದ ಮೂಲಗಳು ತಿಳಿಸಿವೆ. ಇತ್ತೀಚೆಗೆ ನಡೆದ ಸೈನ್ಯದ ಕಮಾಂಡರ್‌ಗಳ ಸಮಾವೇಶದಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕರ್ನಲ್ ಹಾಗೂ ಅವರಿಗಿಂತ ಕೆಳಗಿನ ಹಂತದ ಅಧಿಕಾರಿಗಳ ಸಮವಸ್ತ್ರದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

## ಇಂದು ಶಾಂತಿಸಾಗರ ಬೋಟಿಂಗ್ ನಿಷೇಧ

ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಇಂದು ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ (ಸೂಳೆಕೆರೆ) ಬೋಟಿಂಗ್ ಪಾಯಿಂಟ್‌ಗೆ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಸಾರ್ವಜನಿಕ ಹಾಗೂ ಪ್ರವಾಸಿಗರಿಗೆ ಪ್ರವೇಶ ನಿಷೇಧಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಕಾಂಗ್ರೆಸ್ ಗ್ಯಾರಂಟಿಗಳಿಗೆ ಶಾಸಕರ ಸಹಿ

ನವದೆಹಲಿ, ಮೇ 9 – ಚುನಾವಣಾ ಪ್ರಣಾಳಿಕೆಯಲ್ಲಿ ನೀಡಲಾಗಿರುವ ಐದು ಗ್ಯಾರಂಟಿಗಳನ್ನು ಜಾರಿಗೆ ತರಲು ಎಲ್ಲಾ ಕಾಂಗ್ರೆಸ್ ಅಭ್ಯರ್ಥಿಗಳು ಪ್ರಮಾಣ ಪತ್ರಕ್ಕೆ ಸಹಿ ಹಾಕಿದ್ದಾರೆ. ಈ ಸಹಿ ಹಾಕಿರುವ ಪತ್ರವನ್ನು ರಾಜ್ಯ ಕಾಂಗ್ರೆಸ್ ತನ್ನ ಟ್ವಿಟ್ಟರ್ ಮೂಲಕ ಪ್ರಕಟಿಸಿದೆ.

ಶಾಸಕನಾಗಿ ಆಯ್ಕೆಯಾದಲ್ಲಿ ಕಾಂಗ್ರೆಸ್ ಪಕ್ಷ ನೀಡಿರುವ ಎಲ್ಲಾ 5 ಗ್ಯಾರಂಟಿಗಳನ್ನು ಈಡೇರಿಸುತ್ತೇವೆ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ. ಇದರಲ್ಲಿ 223 ಅಭ್ಯರ್ಥಿಗಳ ಸಹಿ ಇದೆ.

## ಮುಸ್ಲಿಂ ಮೀಸಲಾತಿ ಬಗ್ಗೆ ರಾಜಕೀಯ ಹೇಳಿಕೆ ನೀಡದಂತೆ ನಿರ್ಬಂಧ

ನವದೆಹಲಿ, ಮೇ 9 - ಮುಸ್ಲಿಂ ಸಮುದಾಯದ ಶೇ.4ರ ಮೀಸಲಾತಿ ವಿಷಯ ಸುಪ್ರೀಂ ಕೋರ್ಟ್ ವಿಚಾರಣೆಯಲ್ಲಿರುವ ವೇಳೆಯಲ್ಲೇ ಈ ಬಗ್ಗೆ ರಾಜಕೀಯ ಹೇಳಿಕೆ ನೀಡಿರುವ ಬಗ್ಗೆ ನ್ಯಾಯಾಲಯ ಆಕ್ಷೇಪ ವ್ಯಕ್ತಪಡಿಸಿದ್ದು, ಈ ಬಗ್ಗೆ ರಾಜಕೀಯ ಹೇಳಿಕೆ ನೀಡಬಾರದು ಎಂದು ನಿರ್ಬಂಧಿಸಿದೆ.

ನ್ಯಾಯಾಲಯದ ಎದುರು ಪ್ರಕರಣಗಳು ಬಾಕಿ ಇರುವ ಸಂದರ್ಭದಲ್ಲಿ ರಾಜಕೀಯ ಹೇಳಿಕೆ ನೀಡಬಾರದು. ಇದು ಸೂಕ್ತವಲ್ಲ. ಈ ವಿಷಯದಲ್ಲಿ ಸ್ವಲ್ಪ ಪಾವಿತ್ರ್ಯತೆ ಕಾಯ್ದುಕೊಳ್ಳಬೇಕಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್, ಬಿ.ವಿ. ನಾಗರತ್ನ ಹಾಗೂ ಅಹಸಾನುದ್ದೀನ್ (4ನೇ ಪುಟಕ್ಕೆ)

## ಹರಿಹರ : 228 ಮತಗಟ್ಟೆಗಳಿಗೆ ಸಿಬ್ಬಂದಿಗಳ ರವಾನೆ



ಹರಿಹರ, ಮೇ 9 - ಬುಧವಾರ ನಡೆಯಲಿರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಯ ನಿಮಿತ್ತವಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಚುನಾವಣೆ ಸಿಬ್ಬಂದಿಗಳು ವಿದ್ಯುನ್ಮಾನ ಯಂತ್ರಗಳೊಂದಿಗೆ ಮತಗಟ್ಟೆಯತ್ತ ತೆರಳಿದರು. ಈ ವೇಳೆ ಮಾತನಾಡಿದ ಚುನಾವಣಾಧಿಕಾರಿ ಉದಯ್ ಕುಮಾರ್ ಕುಂಬಾರ, ತಾಲ್ಲೂಕಿನಲ್ಲಿ ಒಟ್ಟು 2 ಲಕ್ಷದ 7 (4ನೇ ಪುಟಕ್ಕೆ)

## ಸರ್ಕಾರ ಅತಂತ್ರವೋ, ಸ್ವತಂತ್ರವೋ...

### ಇಂದು ಮತಪೆಟ್ಟಿಗೆಗೆ ದಾಖಲಾಗಲಿದೆ ಜನಾದೇಶ



ಬೆಂಗಳೂರು, ಮೇ 9 - ಕಳೆದ 2018ರ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಸಿಗದೇ ಪಕ್ಷಾಂತರ ಪರ್ವ, ಸರ್ಕಾರ ಹಾಗೂ ಮುಖ್ಯಮಂತ್ರಿಗಳ ಬದಲಾವಣೆ ಕಂಡಿರುವ ಕರ್ನಾಟಕದ ಜನತೆ, ಮುಂದಿನ ಸರ್ಕಾರ ಯಾವ ರೀತಿ ಇರಬೇಕು ಎಂಬುದನ್ನು ಬುಧವಾರ ನಿರ್ಧರಿಸಲಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ನೇತೃತ್ವದ ಜೆಡಿಎಸ್, ಅಸ್ತಿತ್ವದ ಹೋರಾಟ ನಡೆಸುತ್ತಿದೆ. ಪಂಚರತ್ನ ಯೋಜನೆಗಳ ಮೂಲಕ ಅಧಿಕಾರದ ಗದ್ದುಗೆ ಹಿಡಿಯಲು ಜೆಡಿಎಸ್ ಪ್ರಯತ್ನ ನಡೆಸಿದೆ. ಒಂದು ವೇಳೆ ಅತಂತ್ರ ಪರಿಸ್ಥಿತಿ ಉಂಟಾದರೆ, ಪಂಚರತ್ನ ಯೋಜನೆಯ ಬದಲು ಪಂಚತಂತ್ರಗಳಿಗೆ ಪಕ್ಷ ಮೊರೆ ಹೋಗಬೇಕಾಗಲಿದೆ.

ದೇವೇಗೌಡರು ಆರಂಭದ ಹಂತದಲ್ಲಿ ಪ್ರಚಾರದಿಂದ ದೂರವಿದ್ದರು. ಕೊನೆಯ ಹಂತದಲ್ಲಿ ಚುನಾವಣಾ ಬಿಸಿಯೇರಿದಂತೆ 89 ವರ್ಷದ ಗೌಡರೂ ಪ್ರಚಾರದಲ್ಲಿ ಧುಮುಕಿದರು. ವಿಶೇಷವಾಗಿ ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್ ಹೆಚ್ಚಿನ ಗಮನ ಹರಿಸಿದೆ.

ಮತ್ತೊಂದೆಡೆ, ಬಿಜೆಪಿಯಿಂದ ಸರ್ಕಾರ ಕಸಿಯುವ ಮೂಲಕ ನೈತಿಕ ಬಲ ಹೆಚ್ಚಿಸಿಕೊಳ್ಳಲು ಕಾಂಗ್ರೆಸ್ ಪ್ರಯತ್ನ ನಡೆಸಿದೆ. ಕರ್ನಾಟಕದಲ್ಲಿನ ಗೆಲುವು, 2024ರ ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್‌ಗೆ ನೆರವಾಗಲಿದೆ.

ಸ್ಥಳೀಯ ವಿಷಯಗಳನ್ನು ಮುಂದಿಟ್ಟುಕೊಂಡೇ ಕಾಂಗ್ರೆಸ್ ಪ್ರಚಾರ ಅಭಿಯಾನ ನಡೆಸಿದೆ. ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಪರಸ್ಪರ ಮೇಲಾಟ ಬಿಟ್ಟು (4ನೇ ಪುಟಕ್ಕೆ)

## ನನ್ನ ಹೆಸರಿನಲ್ಲಿ ನಕಲಿ ಪತ್ರ : ಸಿದ್ದರಾಮಯ್ಯ

ಬೆಂಗಳೂರು, ಮೇ 9 - ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ಧರಾಮಯ್ಯ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬರೆದಿದ್ದಾರೆ ಎನ್ನಲಾದ ಪತ್ರ ರಾಜ್ಯ ರಾಜಕೀಯದಲ್ಲಿ ತಲ್ಲಣ ಮೂಡಿಸಿದೆ.

ಪತ್ರ ಹೊರ ಬರುತ್ತಿದ್ದಂತೆ ಸಿದ್ಧರಾಮಯ್ಯ ಅವರು ಆ ಪತ್ರವನ್ನು ಫೇಕ್ ಎಂದು ಬಣ್ಣಿಸಿ ಟ್ವೀಟ್ ಮಾಡಿದ್ದು, ಇದು ಆರ್‌ಎಸ್‌ಎಸ್‌ನ ಕುತಂತ್ರ ಎಂದು ಆರೋಪಿಸಿದ್ದಾರೆ.

ಮತ್ತೊಂದೆಡೆ ಶಿವಕುಮಾರ್ ದಿಢೀರನೆ ಮೈಸೂರಿಗೆ ತೆರಳಿ ಸಿದ್ಧರಾಮಯ್ಯ ಅವರನ್ನು ಭೇಟಿಯಾಗಿ ನಂತರ ಅವರ ಜತೆಗೂಡಿ ಚಾಮುಂಡಿ ಬೆಟ್ಟದಲ್ಲಿ ಒಟ್ಟಾಗಿ ದೇವಿಯ ದರ್ಶನ ಮಾಡಿದ್ದಾರೆ.

ಶಿವಕುಮಾರ್ ಪತ್ರಿಕಾ ಹೇಳಿಕೆ ನೀಡಿ, ಬಿಜೆಪಿ ಅವರಿಗೆ ಮಾಡಲು ಕೆಲಸವಿಲ್ಲ. ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ನನ್ನ ವಿರುದ್ಧ ಪತ್ರ ಬರೆದಿದ್ದಾರೆ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ನನ್ನ ವಿರುದ್ಧ ಏಕೆ ಪತ್ರ ಬರೆಯುತ್ತಾರೆ ಎಂದು ಪ್ರಶ್ನಿಸಿರುವ ಅವರು, ಎಲ್ಲಾ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿ ಮೊನ್ನೆಯಷ್ಟೇ ನಾವಿಬ್ಬರು ಸೇರಿ ಅಭಿಪ್ರಾಯ ಹಂಚಿಕೊಂಡಿದ್ದೇವೆ. ಈಗಲೂ ನಾವು ಮಾತನಾಡಿದ್ದೇವೆ ಎಂದಿದ್ದಾರೆ.

ಅವರಿಗೆ ಜನರ ಬಳಿ ಪ್ರಚಾರಕ್ಕೆ ಸಮಯ ಸಿಗುತ್ತಿಲ್ಲ. ಇನ್ನೂ ಈ ರೀತಿ ದೂರಲು ಎಲ್ಲಿ ಸಾಧ್ಯ? ಬಿಜೆಪಿ ಅವರು ಆಂತರಿಕ ಕಚ್ಚಾಟವನ್ನು ಮುಚ್ಚಿಹಾಕಿಕೊಳ್ಳಲು ಇಂತಹ ಪ್ರಯತ್ನ ಮಾಡಿದ್ದಾರೆ ಎಂದು ದೂರಿದ್ದಾರೆ.

ವಿಧಾನಸಭಾ ಚುನಾವಣಾ ಫಲಿತಾಂಶದ ನಂತರ ಮುಂದಿನ ಮುಖ್ಯಮಂತ್ರಿ ಯಾರು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಕಟಿಸಲಿದ್ದಾರೆ ಎಂದು ಶಿವಕುಮಾರ್ ನಿನ್ನೆಯಷ್ಟೇ ಬಹಿರಂಗ ಪ್ರಚಾರದಲ್ಲಿ ಹೇಳಿಕೆ ನೀಡಿದ್ದರು.

ಹೇಳಿಕೆ ನೀಡಿದ ಬೆನ್ನಲ್ಲೇ ಇಂತಹ ಪತ್ರ ಹೊರ ಬಿದ್ದಿದೆ. ಪತ್ರದ ಬಗ್ಗೆ ಸಿದ್ಧರಾಮಯ್ಯ ಫೇಕ್ ಎಂದಿದ್ದಾರೆ.


# ಮತದಾರ ಜಾಗೃತನಾಗಬೇಕು; ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು

ಭಾರತ ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶ. ಸಾರ್ವಭೌಮ, ಜಾತ್ಯತೀತ, ಪ್ರಜಾಸತ್ತಾತ್ಮಕ ರಾಷ್ಟ್ರ. ಎಲ್ಲಾ ನಾಗರಿಕರಿಗೆ, ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಪ್ರತಿಪಾದಿಸುವಂತಹ ಸಂವಿಧಾನ ನಮ್ಮದು. ಆದರೂ ಚುನಾವಣೆಗಳಲ್ಲಿ ಜಾತಿ ಆಧಾ ರಿತ ಮತ್ತು ಜಾತಿ ಅವಲಂಬಿತವಾಗಿ, ಜಾತಿ, ಧರ್ಮಗಳನ್ನೇ ಮೂಲ ಅಸ್ತ್ರವಾಗಿ ಬಳಸಿ ಕೊಳ್ಳುತ್ತಿ ದ್ದಾರೆ. 3000 ಜಾತಿಗಳು 25000 ಉಪಜಾತಿ ಗಳನ್ನು ಹೊಂದಿರುವ ನಮ್ಮ ದೇಶದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ದಲಿತ ಹೀಗೆ ಎಲ್ಲಾ ಜಾತಿ ಧರ್ಮಗಳಿಂದ ಕೂಡಿರುವ ಜಾತ್ಯತೀತ ರಾಷ್ಟ್ರವಾಗಿದೆ.

'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬಂತೆ ಎಲ್ಲರನ್ನು ಸಮಾನವಾಗಿ ಕಾಣಬೇಕಾದಂತಹ ಕೆಲವು ಧಾರ್ಮಿಕ ಮಠಾಧಿಪತಿಗಳೂ ಸಹ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿ ಜಾತಿ, ಧರ್ಮಗಳ ಬಗ್ಗೆ ಪರ-ವಿರೋಧ ಮಾಡಿ ಬಹಿರಂಗವಾಗಿ ಕೆಲವರನ್ನೇ, ಕೆಲವು ಪಕ್ಷಗಳನ್ನೇ ಬೆಂಬಲಿಸುತ್ತಿರುವುದು ಒಂದು ದೊಡ್ಡ ದುರಂತ. ನಮ್ಮ ದೇಶದಲ್ಲಿ ಜಾತಿ ಎಷ್ಟು ಬೇರು ಊರಿದೆ ಎಂದರೆ ಉದಾಹರಣೆ ಮುಖಾಂತರ ಹೇಳಬೇಕೆಂದರೆ ಕಾಡು ನಾಶವಾಗುತ್ತಿದ್ದರೂ ಕಾಡಿನ ಮರಗಳು ಕೊಡಲಿಯ ಹಿಡಿಕೆಗೆ ಓಟು ಹಾಕಿದವು, ಏಕೆಂದರೆ ಕೊಡಲಿಯ ಹಿಡಿ (ಕಾವು) ನಮ್ಮ ಜಾತಿಯವನು ಎಂದು.

ಹಿಂದೆ ರಾಜಕೀಯ ಕ್ಷೇತ್ರ ಮತ್ತು ರಾಜಕಾರಣಿಗಳ ಉದ್ದೇಶಗಳು ನಿಸ್ವಾರ್ಥ ಭಾವನೆಯಿಂದ ದೇಶ ಸೇವೆ ಮಾಡುವ ಘನ ಉದ್ದೇಶವಾಗಿತ್ತು. ಆದರೆ ಇವತ್ತಿನ ರಾಜಕೀಯ ಕ್ಷೇತ್ರ ವ್ಯಾಪಾರ ದಂತೆ ಆಗಿದೆ. ಬಂಡವಾಳ ಹಾಕಿ ಲಾಭ ಮಾಡಿ ಕೊಳ್ಳುವುದೇ ಅದರ ಪರಮ ಗುರಿಯಾಗಿದೆ.

ದೇಶ ಇಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾ ಇದೆ. ಅದರಲ್ಲಿ ಪ್ರಮುಖ ದೊಡ್ಡ ಸಮಸ್ಯೆಯೇ 'ಭ್ರಷ್ಟಾಚಾರ'. ಈ ಭ್ರಷ್ಟಾಚಾರದಿಂದ ರಾಜಕಾರಣಿಗಳ ಖಜಾನೆ ತುಂಬುತ್ತಿದ್ದು, ಸರ್ಕಾರದ ಬೊಕ್ಕಸದಿಂದ ಜನಸಾಮಾನ್ಯರ ಕೋಟಿಗಟ್ಟಲೆ ಹಣ ಲೂಟಿಯಾಗುತ್ತಿದೆ. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಂತೂ ಅಕ್ರಮ ಹಣ ಮಾಡುವ ಸಾಧನಗಳಾಗಿವೆ.



ಜಾತಿ, ಧರ್ಮಗಳ ವಿಚಾರ ಬಿಡಿ, ದೇಶದ ಅಭಿವೃದ್ಧಿ ಕಡೆ ಗಮನ ಕೊಡಿ

ಅಭ್ಯರ್ಥಿಗಳನ್ನು ಗುರ್ತಿಸಿ ಮತ ಹಾಕುವ ಜವಾಬ್ದಾರಿ ನಮ್ಮ ಕೈಯ್ಯಲ್ಲಿ ಇದೆ. ಅನೇಕ ವರ್ಷಗಳಿಂದ ಬೇರೂರಿರುವ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಹೆಚ್ಚು ಹಳ್ಳಿಗಳನ್ನು ಹೊಂದಿರುವ ನಮ್ಮ ದೇಶದಲ್ಲಿ ಸುಮಾರು ಶೇಕಡ 60-70 ರಷ್ಟು ಜನಸಂಖ್ಯೆ ಕೃಷಿ ಕ್ಷೇತ್ರವನ್ನು ಅವಲಂಬಿಸಿದೆ.

ಮಳೆ, ಬೆಳೆ ಇಲ್ಲದೇ ಬೆಳೆಗೆ ತಕ್ಕ ಬೆಲೆ ಇಲ್ಲದೆ ರೈತರು ಸಾಲ, ಬಡ್ಡಿ ಕಟ್ಟಲಾಗದೆ ಕಂಗಾಲಾಗಿದ್ದಾರೆ. ಆಧುನಿಕ ತಂತ್ರಜ್ಞಾನಗಳನ್ನು ಉಪಯೋಗಿಸಿ ಕೃಷಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕಾಗಿದೆ.

ಚುನಾವಣೆ ಸಮಯದಲ್ಲಿ ಟೀಕೆ-ಟಿಪ್ಪಣಿಗಳು ಆರೋಪ, ಸುಳ್ಳು ಆಶ್ವಾಸನೆಗಳು ಪ್ರತ್ಯಾರೋಪಗಳು ಪಕ್ಷಗಳ ಮಧ್ಯೆ ಇದ್ದದ್ದೇ, ಆದರೆ ಅವುಗಳು ಸತ್ಯಕ್ಕೆ ದೂರವಾಗಿರಬಾರದು. ವಾಟ್ಸಾಪ್ ಮತ್ತು ಫೇಸ್‌ಬುಕ್‌ಗಳಲ್ಲಿ ಅಪಪ್ರಚಾರ, ಸುಳ್ಳು ಆರೋಪ, ಅಪಹಾಸ್ಯದ ಕಾರ್ಟೂನ್, ರೀಮಿಕ್ಸ್, ಎಡಿಟೆಡ್ ವಿಡಿಯೋಗಳು ಇದರಿಂದ ಮುಗ್ಧ ಜನಗಳಿಗೆ ಸತ್ಯಾಂಶ ತಿಳಿಯದೇ ಗೊಂದಲಕ್ಕೆ ಈಡಾಗುತ್ತಿರುವುದಲ್ಲದೆ, ಯಾವ ಪಕ್ಷ ಮತ್ತು ಯಾವ ಅಭ್ಯರ್ಥಿ ಸರಿ ಎನ್ನುವುದನ್ನು ತೀರ್ಮಾನಿಸುವುದು ಕಷ್ಟವಾಗುತ್ತಿದೆ.

ಚುನಾವಣೆ ಕಾವು ಏರುತ್ತಿರುವ ಪ್ರಚಾರದ ಸಮಯದಲ್ಲಿ ಹಳ್ಳಿಗಳಲ್ಲಿ ರೈತರು, ಯುವಕರು, ನಿರುದ್ಯೋಗಿಗಳಿಗೆ ಅಂಗೈಯಲ್ಲಿ ಅರಮನೆ ತೋರಿಸುವ ಕೆಲವು ರಾಜಕಾರಣಿಗಳ ಪ್ರಚೋದನೆಗಳಿಗೆ ಮತ್ತು ಸುಳ್ಳು ಆಶ್ವಾಸನೆಗಳಿಗೆ, ಹಣ ಹೆಂಡಕ್ಕೆ ಆಸೆಪಟ್ಟು ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಬಿಟ್ಟು ರಾಜಕೀಯದಲ್ಲಿ ಮುಳುಗಿ ಯುವ ಶಕ್ತಿ, ದುಡಿಮೆ, ಸಮಯ ಎಲ್ಲಾ ವ್ಯರ್ಥವಾಗುತ್ತಿದೆ.

ರಾಜಕೀಯ ಅಭ್ಯರ್ಥಿಗಳ ಹಿನ್ನೆಲೆ ಅರಿತು ಅವರು ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಗಮನಿಸಿ ಅವರ ಪರಿಶ್ರಮ, ಪ್ರತಿಭೆ, ವಿದ್ಯೆ ಸಾಮಾನ್ಯ ಜ್ಞಾನ, ಅವರ ವೈಯಕ್ತಿಕ ಚರಿತ್ರೆ, ಯೋಗ್ಯತೆ, ಅರ್ಹತೆ ದೂರದೃಷ್ಟಿ, ತಂತ್ರಜ್ಞಾನ ಮತ್ತು ಕಾನೂನಿನ ಅರಿವು ಅವರ ತತ್ವ ಸಿದ್ಧಾಂತಗಳ ಹಿನ್ನೆಲೆಯನ್ನು ಅರಿತು ಅಭ್ಯರ್ಥಿ ಮತ್ತು ಪಕ್ಷ ಮಾಡಿರುವ ಅಭಿವೃದ್ಧಿ ಕಾರ್ಯಗಳ ನಿದರ್ಶನಗಳನ್ನು ಮತ್ತು ಸಮಾಜ ಸೇವೆಗಳನ್ನು ಅರಿತು ಜಾಗೃತರಾಗಿ ಮತ ಚಲಾಯಿಸಬೇಕು. ರಾಜಕೀಯ ನಾಯಕರುಗಳು ಜನರ ನಾಯಕರಾಗದೆ ಜನಸೇವಕರಾಗಬೇಕು.

ಜನಪರ ಕಾರ್ಯಗಳನ್ನು ಮಾಡುವಂತವ ರಿಗೆ ಮತ ಚಲಾಯಿಸಿ, ಬರೀ ಪ್ರಚಾರ, ಅಧಿಕಾರ, ಕೀರ್ತಿ, ಹಣ ಪಡೆದು ಬೆಳಗಾಗುವುದರೊಳಗೆ ಶ್ರೀಮಂತರಾಗಬೇಕು ಎನ್ನುವವರ ಸಂಖ್ಯೆ ಹೆಚ್ಚುತ್ತಿದೆ. ಇಂತಹವರು ಚುನಾವಣೆ ಮುಗಿದ ನಂತರ ಮತದಾರರತ್ತ ತಲೆ ಹಾಕಿ ಮಲಗುವುದಿಲ್ಲ. ಇಂತಹವರಿಗೆ ಮತ ಹಾಕುವುದು ವ್ಯರ್ಥ.

ವಿಧಾನಸಭೆ ಚುನಾವಣೆಗೆ ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸೋಣ. ಮತದಾನ ಪ್ರತಿಯೊಬ್ಬರ ಮೂಲಭೂತ ಹಕ್ಕು. ಇದರಿಂದ ಮುಂದಿನ ಐದು ವರ್ಷಗಳ ನಮ್ಮ ಮತ್ತು ದೇಶದ ಭವಿಷ್ಯ ನಿರ್ಧಾರವಾಗಲಿದೆ. ಮುಂದಿನ ಪೀಳಿಗೆಗೆ ಮಾದರಿ ಆಗುವಂತೆ ಜನ ಸಾಮಾನ್ಯರ ಹಿತ ಬಯಸುವ ಅಭ್ಯರ್ಥಿ ಮತ್ತು ಪಕ್ಷಗಳನ್ನು ಆರಿಸಿ ಸದೃಢ ಭಾರತ ದೇಶವನ್ನು ಕಟ್ಟೋಣ.



**- ಹೆಚ್.ವಿ. ಮಂಜುನಾಥ ಸ್ವಾಮಿ**
9844882366

## ಸಿದ್ಧಗಂಗಾ ಕಾಲೇಜಿನ ವಿದ್ಯಾರ್ಥಿಗಳಿಂದ ಮತದಾನ ಜಾಗೃತಿ




ದಾವಣಗೆರೆ, ಮೇ 9- ನಗರದ ಸಿದ್ಧಗಂಗಾ ಪದವಿ ಪೂರ್ವ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು, ಎಲ್ಲಾ ಮತದಾರರು ತಮ್ಮ ಅಮೂಲ್ಯ ಮತ ಚಲಾಯಿಸಲು 'VOTE TODAY' ವಿನ್ಯಾಸ ರಚಿಸಿ ಜಾಗೃತಿ ಮೂಡಿಸಿದ್ದಾರೆ. ಕಾಲೇಜಿನ ಪಿಯು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಡಾ.ಜಯಂತ್ ಮತ್ತು ದೈಹಿಕ ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನದಲ್ಲಿ ಚಿತ್ರ ರಚಿಸಿದ್ದಾರೆ.

## 'ಮಾರಾಟವಾಗಬೇಡ ಮತದಾರ..!'

'ನೀನು ಹೋರಾಟ ಮಾಡು, ಆದರೆ ಮಾರಾಟವಾಗಬೇಡ' ಈ ಮಾತು ಡಾ. ಅಂಬೇಡ್ಕರ್ ಅವರ ಮಾತು. ಅವರು ಅಂದು ಹೇಳಿದ ಮಾತು ಇಂದು ನಿಜವಾಗುತ್ತಿದೆ ಅನಿಸುತ್ತಿದೆ ಅಲ್ಲವೇ? ಇನ್ನು ಒಂದು ತಿಂಗಳಲ್ಲಿ ಮತದಾರನ ಮಾರಾಟ, ಇದುವರೆಗೂ ಸೀಟಿಗಾಗಿ ಪರದಾಟ ಹಾಗು ಮಾರಾಟ. ಚುನಾವಣೆ ಮುಗಿದ ಮೇಲೆ ಮಂತ್ರಿಗಿರಿಗಾಗಿ ಮಾರಾಟ.




ನಿನ್ನನ್ನು (ಮತದಾರ) ನೀನು ಎಲ್ಲಿಯವರೆಗೂ ಕೆಟ್ಟ ಆಸೆಯಿಂದ ದೂರವಿಡುವುದಿಲ್ಲವೋ ಅಲ್ಲಿಯವರೆಗೂ ನೀನು ಇನ್ನೊಬ್ಬನ ಅಡಿಯಾಳು. ಒಂದು ಒಳ್ಳೆಯ ಬೀಜವನ್ನು ಭೂಮಿಯಲ್ಲಿ ಊರಿದರೆ ಅದು ಒಳ್ಳೆಯ ಫಲವನ್ನೇ ಕೊಡುವುದು. ಒಂದು ಹಾಳಾದ ಬೀಜವನ್ನು ಭೂಮಿಗೆ ಹಾಕಿ, ಒಳ್ಳೆಯ ಫಲವನ್ನು ಬಯಸಿದರೆ ಮೂರ್ಖತನವಲ್ಲವೇ? ಈಗ ಬಂದಿರುವ ಚುನಾವಣೆಯಲ್ಲಿ ಮತದಾರ ಒಬ್ಬ ಒಳ್ಳೆಯ ವ್ಯಕ್ತಿಯನ್ನು ಯಾವುದೇ ಫಲಾಪೇಕ್ಷೆಯಿಲ್ಲದೇ ಚುನಾಯಿಸಿದರೆ, ಅವನಿಂದ ನಿಮಗೇ ಆಗಬೇಕಾದ ಕೆಲಸಗಳನ್ನು ಧೈರ್ಯದಿಂದ ಕೇಳಿ ಮಾಡಿಸಬಹುದಾಗಿರುತ್ತದೆ.

ಅಪ್ಪಿ ತಪ್ಪಿ ನೀವು ಕುಕ್ಕರ್, ಲಿಕ್ಕರ್, ಸೀರೆ, ಮೂಗ್ನತ್ತು, ಇನ್ನೂರು, ಐನೂರು ಅಂತ ಪಡೆದು ಮತ ಹಾಕಿ ಯೋಗ್ಯತೆಯಿಲ್ಲದ ಮೂರ್ಖನನ್ನು ಗೆಲ್ಲಿಸಿದರೆ, ನಿಮಗೆ ಅವನನ್ನು ಪ್ರಶ್ನೆ ಮಾಡಲು ಯಾವ ನೈತಿಕತೆಯೂ ಇರುವುದಿಲ್ಲ.

ಯಾವ ಪಕ್ಷ ಗೆದ್ದು ಬಂದರೂ, ಯಾವ ವ್ಯಕ್ತಿ ಗೆದ್ದು ಬಂದರೂ ನೀನು ಮಾತ್ರ ಹಾಗೆಯೇ ಇರುತ್ತೀಯ. ಮೊದಲ ಬಾರಿಗೆ ಗೆದ್ದು ಬಂದವನು ಮುಂದಿನ ಚುನಾವಣೆಯೊಳಗೆ ಒಂದು ಆಸ್ಪತ್ರೆಯನ್ನೋ, ಒಂದು ಶಾಲೆಯನ್ನೋ ಕಟ್ಟಿಸಿರುತ್ತಾನೆ. ಅಷ್ಟೇ ಅಲ್ಲ ಮಕ್ಕಳ ಹೆಸರಲ್ಲಿ, ಹೆಂಡತಿಯ ಹೆಸರಲ್ಲಿ, ಸಂಬಂಧಿಕರ ಹೆಸರಲ್ಲಿ ಆಸ್ತಿಗಳನ್ನು ಮಾಡಿ, ತಾನು ನೋಟಿನ ಹಾಸಿಗೆಯ ಮೇಲೆ ಮಲಗಿರುತ್ತಾನೆ ಗೊತ್ತಲ್ಲವೇ?

ಈಗ ಮತದಾರರಿಗೆ ಅದೆಷ್ಟೋ ಆಸೆ ಆಮಿಷಗಳನ್ನೊಡ್ಡಿ ಮತ ಕೇಳುವ ಈ ರಾಜಕಾರಣಿಗಳು, ಗೆದ್ದ ನಂತರ ಅವರ ಆಸೆಗಳನ್ನು ಮಾತ್ರ ಪೂರೈಸಿಕೊಳ್ಳುತ್ತಾರೆ. ಅದಕ್ಕೇ ಸಾಕಾಗುತ್ತದೆ ಐದು ವರ್ಷ.

ಈ ಐದು ವರ್ಷಗಳಲ್ಲಿ ನಿನಗೇನು ಸಿಕ್ಕಿದ್ದು? ಏನೂ ಇಲ್ಲ. ನೀನು ಕಟ್ಟುವ ಟ್ಯಾಕ್ಸ್‌ನಿಂದ ಅವರು ಉದ್ಧಾರವಾಗು ತ್ತಾರೆ. ಅಷ್ಟೇ ಅಲ್ಲ ತಿಳ್ಕೊಳ್ಳಿ, ನಿಮಗೆ ಯಾವುದೇ ಕಾರ್ಯಕ್ರಮದಲ್ಲೂ ಮುಂದಿನ ಸೀಟಿಲ್ಲ, ನಿಮ್ಮ ಪ್ರಶ್ನೆಗೆ ಉತ್ತರವಿಲ್ಲ, ನಿಮ್ಮ ಕೆಲಸಗಳು ಆಗುವುದಿಲ್ಲ, ನಿಮಗೆ ಮರ್ಯಾದೆಯೇ ಇಲ್ಲ. ಕುಕ್ಕರ್-ಲಿಕ್ಕರ್, ಬಾಡೂಟ -ಬಾಟಲಿ, ಇನ್ನೂರು-ಮುನ್ನೂರು ಪಡೆದಿದ್ದರಿಂದ ನೀವು ಮಾತನಾಡುವ ಹಕ್ಕನ್ನೇ ಕಳೆದುಕೊಂಡು ಬಿಡುತ್ತೀರಿ.

ನಾನೇಳುವುದು ಇಷ್ಟೇ, ಹೋರಾಟ ಮಾಡಲು ಅವಕಾಶ ಉಳಿಸಿಕೊಳ್ಳಿ, ನಿಮ್ಮನ್ನು ಮಾರಾಟ ಮಾಡಿ ಕೊಳ್ಳಬೇಡಿ. ಭ್ರಷ್ಟಾಚಾರ ನಿಮ್ಮಿಂದಲೇ ಶುರು ಮಾಡಬೇಡಿ, ನಿಮ್ಮ ಹಕ್ಕನ್ನು ನೀವು ಚಲಾಯಿಸಿ, ಮತ ಚಲಾಯಿಸುವದನ್ನು ಮರೆಯಬೇಡಿ.

**- ವನಜಾ ಮಹಾಲಿಂಗಯ್ಯ ಮಾದಾಪುರ,**
ಸಮಾಜ ಸೇವಕಿ, ದಾವಣಗೆರೆ

## ಸ್ವಯಂ ಪ್ರೇರಿತರಾಗಿ ಮತದಾನ ಮಾಡದೇ ಇರುವವರಿಗೆ ಒಂದು ದಂಡ ಅಂತ ಆಗಬೇಕು

### ಓದುಗರ ಪತ್ರಕ್ಕೆ ಪ್ರತಿಕ್ರಿಯೆ

**ಇದು ಅನಿವಾರ್ಯವೇ ?**

ಮಹಿಮಾ ಪಾಟೀಲ್. ಮಾಜಿ ಶಾಸಕರು, ಎಂ ಸಿದ್ದಯ್ಯ ವಕೀಲರು, ಅನಿಸ್ ಬಾಷಾ . ವಕೀಲರು, ಶಿವನಕೆರೆ ಬಸವಲಿಂಗಪ್ಪನವರು ಸಮಾಜ ಸೇವಕರು, ಅವರುಗಳು ಮೇ 4ರ ಗುರುವಾರದ 'ಜನತಾವಾಣಿ'ಯ ಓದುಗರ ವಿಭಾಗದಲ್ಲಿ, ಬರೆದ 'ಚುನಾವಣೆಯೋ ? ಯುದ್ಧವೋ ?' ಎಂಬ ಲೇಖನ ಸಮಯೋಚಿತವಾಗಿತ್ತು.

ಕೋಟಿಗಟ್ಟಲೆ ಹಣ ಖರ್ಚು ಮಾಡಿ, ಚುನಾವಣೆಯನ್ನು ಎದುರಿಸುತ್ತಿರುವ ಅಸಂಖ್ಯಾತ ಅಭ್ಯರ್ಥಿಗಳನ್ನು ಮತ್ತು ಅವರು ಮಾಡುತ್ತಿರುವ ಅಬ್ಬರದ ಪ್ರಚಾರದ ವೈಖರಿಯನ್ನು ನೋಡಿ, ಇವರಲ್ಲಿ ಯಾರನ್ನು ಆಯ್ಕೆ ಮಾಡುವುದು ಎಂಬ ಜಿಜ್ಞಾಸೆ ಜನತೆಗೆ ಕಾಡುತ್ತಿರುವುದಂತೂ ನಿಜ. ಏಕೆಂದರೆ ಇವರಲ್ಲಿ ಯಾರೇ ಆಯ್ಕೆಯಾದರೂ, ಇಷ್ಟು ಹಣ ಖರ್ಚು ಮಾಡಿ ನಿಸ್ವಾರ್ಥವಾಗಿ, ಪ್ರಾಮಾಣಿಕವಾಗಿ ಜನಸೇವೆ. ಮಾಡಲು ಸಾಧ್ಯವೇ ? ಎಂಬ ಪ್ರಶ್ನೆ ಕಾಡುತ್ತಿರುವುದಂತೂ ನಿಜ.

ಪಕ್ಷಗಳ ನಾಯಕರ ಮತ್ತು ಹೈಕಮಾಂಡ್‌ನಿಂದ ಟಿಕೆಟ್ ಗಿಟ್ಟಿಸಿ ಕೊಂಡಾಗಿನಿಂದ ಶುರುವಾಗುತ್ತದೆ ಹಣದ ಖರ್ಚು, ಕರಪತ್ರಗಳನ್ನು ಮುದ್ರಿಸುವುದು, ಅಸಂಖ್ಯಾತ ಕಾರ್ಯಕರ್ತರನ್ನು (ಇವರಲ್ಲಿ ಬಹಳಷ್ಟು ಜನರಿಗೆ ದಿನಕ್ಕೆ ಇಷ್ಟು ಅಂತ ದರ ನಿಗದಿ ಮಾಡಿರುತ್ತಾರೆ. ಇದು ತಪ್ಪು ಅಂತ ಹೇಳುವುದಕ್ಕೆ ಆಗುವುದಿಲ್ಲ ಯಾಕೆಂದರೆ ಇಂದಿನ ಎಲ್ಲಾ ದುಬಾರಿ ಜೀವನದಲ್ಲಿ ತಮ್ಮ ಕೆಲಸ, ಕಾರ್ಯಗಳನ್ನು ಬಿಟ್ಟು ಬರುವುದಕ್ಕೆ ಆಗುವುದಿಲ್ಲ) ಬಳಸಿಕೊಳ್ಳುವುದರ ಖರ್ಚು, ಚುನಾವಣೆ ಪ್ರಚಾರಕ್ಕೆ ಅಂತ ಬರುವ ನಾಯಕರ ಊಟ, ವಸತಿ ವಗೈರೆ ಖರ್ಚು, ಮತದಾರ ರನ್ನು ಸೆಳೆಯಲು ಆಮಿಷದ ಖರ್ಚು, ಹಾಗೂ ಹೀಗೂ ಪ್ರಚಾರ ಮುಗಿಸಿದರೆ, ಮತದಾನದ ಅಂದಿನ ಪ್ರತಿ ಮತಗಟ್ಟೆಯ ಬೂತ್‌ನ ಖರ್ಚು ಮತದಾನದ ಹಿಂದಿನ ದಿನದ ಖರ್ಚು, ಗೆದ್ದರೆ ನಂತರದ ಖರ್ಚು ಹೀಗೆ ಹೇಳುತ್ತಾ ಹೋದರೆ ಒಂದೇ ಎರಡೇ..

ಮೊದಲಿನ ಚುನಾವಣೆಗಳು ಹೀಗಿರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಬರುಬರುತ್ತಾ ಅಸಂಖ್ಯಾತ ಕೋಟಿಗಳಲ್ಲಿ ಚುನಾವಣೆಗಳು ನಡೆಯುತ್ತಿರುವುದಂತೂ ಸತ್ಯ.

ಮೊದಲು ಬ್ಯಾನರ್, ಕಟೌಟ್, ಬಂಟಿಂಗ್ಸ್ ಅಂತ ಸಾಕಷ್ಟು ಹಣವನ್ನು ಖರ್ಚು ಮಾಡುತ್ತೀದ್ದರು, ಈಗ ಇದನ್ನು ಚುನಾವಣಾ ಆಯೋಗ ನಿಷೇಧಿಸಿದೆ. ಅದೇ ರೀತಿ , ಹೀಗೆ ನಾನಾ ತರಹದ ಖರ್ಚುಗಳನ್ನು ತಡೆಯಬಹುದಲ್ಲವೇ...

ಇದಕ್ಕೆ ಪರಿಹಾರ ಎಂದು ನನಗೆ ಒಂದು ವೈಯಕ್ತಿಕ ಯೋಚನೆ ಮೂಡಿದೆ. ಇದು, ಎಷ್ಟರ ಮಟ್ಟಿಗೆ ಸರಿ, ತಪ್ಪು ಗೊತ್ತಿಲ್ಲ. ಇದರ, ಸಾಧಕ - ಬಾಧಕಗಳು ಗೊತ್ತಿಲ್ಲ . ಅದು ಏನೆಂದರೆ.., ಇಂದಿನ ಪ್ರಧಾನಿ ಮೋದಿಯವರು ಎಲ್ಲದಕ್ಕೂ ಆಧಾರ್ ಕಾರ್ಡ್ ಜೋಡಣೆ ಮಾಡಿದಂತೆ, ಅದೇ ತರಹ ಮತದಾರರ ಪಟ್ಟಿಗೆ ಜೋಡಣೆ ಮಾಡಿದರೆ, ಪ್ರತಿ ಜನಸಾಮಾನ್ಯರು ಸ್ವಯಂ ಪ್ರೇರಿತರಾಗಿ, ಮತಗಟ್ಟೆಗೆ ಬಂದು ಅಲ್ಲಿಯೇ ಇಟ್ಟಿರುವ ಸೂಚನಾ ಫಲಕ ನೋಡಿ ಯಾವ ಪಕ್ಷ , ಯಾವ ಅಭ್ಯರ್ಥಿ , ಎಂದು ತಿಳಿದು ಮತ ಹಾಕುವುದು ಸರಿ ಎನಿಸುತ್ತದೆ. ಅಭ್ಯರ್ಥಿಗಳು ಬೇಕಾದರೆ ತಮ್ಮ ಜೊತೆಗೆ ಐದು ಜನ ಬೆಂಬಲಿಗರೊಂದಿಗೆ ಅಬ್ಬರವಿಲ್ಲದೇ ಮನೆ ಮನೆಗೆ ತೆರಳಿ ಮತದಾರರನ್ನು ಮತ ಯಾಚಿಸ ಬಹುದಲ್ಲವೇ.. ಹಾಗೇಯೇ ಮತದಾರರು, ಮತದಾನದ ತಮ್ಮ ಪ್ರಮುಖ ಹಕ್ಕನ್ನು ತಮ್ಮ ಪ್ರಮುಖ ಕರ್ತವ್ಯವೆಂದು ತಿಳಿದು ಸ್ವಯಂ ಪ್ರೇರಿತರಾಗಿ ಮತಗಟ್ಟೆಗೆ ಬಂದು, ಮತದಾನ ಮಾಡಿದರೆ ಸಾಮಾನ್ಯ ಖರ್ಚಿನಲ್ಲಿ ಶೇಕಡ ನೂರಕ್ಕೆ, ನೂರು ಪರ್ಸೆಂಟ್ ಮತದಾನವಾಗುವುದಿಲ್ಲವೇ... ಸ್ವಯಂಪ್ರೇರಿತರಾಗಿ ಮತದಾನ ಮಾಡದವರಿಗೆ ಒಂದು ದಂಡ ಅಂತ ವಿಧಿಸ ಬಹುದಲ್ಲವೇ.. ಅನಿವಾರ್ಯವಾಗಿ, ಮತಗಟ್ಟೆಗೆ ಬರಲು ಆಗದ ವರಿಗೆ , ಅಶಕ್ತರಿಗೆ, ಅಂಗವಿಕಲರಿಗೆ , ವೃದ್ದರಿಗೆ , ಈ ಬಾರಿ ಚುನಾವಣೆ ಸಿಬ್ಬಂದಿ ಮನೆಗೇ ಬಂದು ಮತ ದಾನ ಮಾಡಿಸಿದರಲ್ಲ ಹಾಗೇ ಮಾಡ ಬಹುದಲ್ಲವೇ..

ಈ ದುಂದು ವೆಚ್ಚದ ಹಣವನ್ನು ದೇಶದ ಒಳಿತಿಗಾಗಿ ಬಳಸಬಹುದಲ್ಲವೇ... ಎಂಬುದು ನನ್ನ ವೈಯಕ್ತಿಕ ಅನಿಸಿಕೆ, ಮತ್ತು ಅಭಿಪ್ರಾಯ, ಯಾವುದೇ ತಪ್ಪು...ಒಪ್ಪು ಇದ್ದರೆ ಮನ್ನಿಸಿ..

**- ಪೂರ್ಣಿಮಾ ಎಲ್.ಬಸವರಾಜ್**
ಗೃಹಿಣಿ , ದಾವಣಗೆರೆ.

## ಪ್ರಜಾಪ್ರಭುತ್ವದ ಅರ್ಥ ಉಳಿದೀತೆ ?

ಪ್ರಜಾಪ್ರಭುತ್ವವೆಂಬ ಪಾಯಸಕ್ಕೆ ಚುನಾವಣೆ ಎಂಬ ಸಕ್ಕರೆಯೊಂದಿಗೆ ಮತದಾನವೆಂಬ ತುಪ್ಪ ಬೆರೆಸಿ, ಸಿಹಿಯಾದ ಜೀವನ ನಡೆಸುವ ತೀರ್ಮಾನ ನಮ್ಮದಾಗಿದೆ. ಇದೇ ದಿನಾಂಕ 10ನೇ ಬುಧವಾರದಂದು ಕರ್ನಾಟಕದ ಸಾರ್ವತ್ರಿಕ ಚುನಾವಣೆಗಳು ಜರುಗಲಿವೆ. ಮುಂದಿನ ಐದು ವರ್ಷಗಳಲ್ಲಿ ನಮ್ಮ ಕರ್ನಾಟಕವನ್ನು ಯಾರು? ಹೇಗೆ ? ಆಳಬೇಕು ಎಂಬ ತೀರ್ಮಾನವಾಗಲಿದೆ.

ಈ ಮಹತ್ತರವಾದ ತೀರ್ಮಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ಮತದಾರ ಪ್ರಭುಗಳು ಪಕ್ಷ, ವ್ಯಕ್ತಿ, ವ್ಯಕ್ತಿತ್ವ, ಸಿದ್ಧಾಂತ, ಪ್ರಣಾಳಿಕೆಗಳನ್ನು ನೋಡಿ ಮತ ಹಾಕಬೇಕು. ರಾಜಕೀಯದ ಎಲ್ಲಾ ಪಕ್ಷಗಳು ನೇರ ಮುಖಾಮುಖಿ ಪೈಪೋಟಿಗೆ ಇಳಿದುಬಿಟ್ಟಿವೆ. ನಾನು ಮೇಲು - ನಾನು ಮೇಲು ಎಂದು ಅಬ್ಬರದ, ಆಡಂಬರದ ಪ್ರಚಾರಕ್ಕೆ ಮುಂದಾಗಿದ್ದಾರೆ. ನಮ್ಮ ಪ್ರಜಾಪ್ರಭುತ್ವದ ಸಂವಿಧಾನದ ವ್ಯವಸ್ಥೆಯಲ್ಲಿ ಮತದಾರ ಬಾಂಧವರ ಕೈಯ್ಯಲ್ಲಿದೆ ನಮ್ಮ ರಾಷ್ಟ್ರದ ಭವಿಷ್ಯದ ನಿರ್ಮಾಣ. ಆದರೆ, ನಮ್ಮ ಮತದಾರರು ಸ್ವಾಭಿಮಾನ ಮರೆತು ಅಭ್ಯರ್ಥಿಗಳು ನೀಡುತ್ತಿರುವ ಹಣಕ್ಕೆ, ಹೆಂಡಕ್ಕೆ, ಊಟಕ್ಕಾಗಿ ಹಾತೊರೆಯುತ್ತಿದ್ದಾರೆ. ಒಪ್ಪತ್ತಿನ ಕೂಳಿಗೆ ವರುಷದ ಜೀವನವನ್ನು ಬಲಿಕೊಡುತ್ತಿದ್ದಾರೆ. ಕೆಲವೊಬ್ಬರು ಯಾರು ಹೆಚ್ಚು ಹಣ ನೀಡುವರೋ ಅವರಿಗೆ ನಮ್ಮ ಮತ ಎನ್ನುತ್ತಿದ್ದಾರೆ. ಇನ್ನೂ ಕೆಲವರು ಎಲ್ಲರೂ ಕೊಡುವುದನ್ನು ತೆಗೆದುಕೊಳ್ಳೋಣ ಮತದಾನದ ದಿನ ಕುಡಿದ ಅಮಲಿನಲ್ಲಿ ಅವರ ಆಮಿಷಗಳಿಗೆ ಬಲಿಯಾಗಿ ಯಾರಿಗೋ ಒಬ್ಬರಿಗೆ ಮತವನ್ನು ನೀಡಿದರಾಯಿತು ಎನ್ನುತ್ತಿದ್ದಾರೆ. ಇನ್ನು ಕೆಲವರು ನಮಗ್ಯಾಕೆ ರಾಜಕೀಯ? ಯಾವ ಪಕ್ಷ ಬಂದರೆ ನಮಗೇನು? ರಜಾ ಇದೆ, ಮೋಜು, ಮಸ್ತಿ ಎಂದು ಒಂದು ಸಣ್ಣ ಪ್ರವಾಸ, ಒಂದು ಟ್ರಿಪ್, ಊರು ಎಂದು ತಮಗೆ ಸಂಬಂಧವೇ ಇಲ್ಲವೆಂದು ತೆರಳುತ್ತಿದ್ದಾರೆ. ಯಾರಿಂದಲೂ ಹಣ ಬೇಡ ಎನ್ನುವವರ ಸಂಖ್ಯೆ ಗೌಣವಾಗುತ್ತಿದೆ.

ಭ್ರಷ್ಟಾಚಾರದ ಕಪ್ಪು ನೆರಳಿನಲ್ಲಿ ಸ್ವಾಭಿಮಾನಿಗಳು ಚುನಾವಣೆಯತ್ತ ತಲೆನೇ ಹಾಕದಂತಾಗಿದೆ. ಎಲ್ಲರೂ ಒಂದು ಕ್ಷಣ ನಮ್ಮ ಮುಂದಿರುವ ಸವಾಲುಗಳನ್ನು ಒಮ್ಮೆ ಅವಲೋಕಿಸೋಣವೇ ?......

ನಮ್ಮ ಅತ್ಯಮೂಲ್ಯ ವೋಟನ್ನು ನೋಟಿಗೆ ಮಾರಿದರೆ, ಪ್ರಜಾಪ್ರಭುತ್ವಕ್ಕೆ ಅರ್ಥವಿದೆಯೇ ? ರಾಜಕೀಯ ವ್ಯವಸ್ಥೆಯ ನೈತಿಕ ಅಧಃಪತನಕ್ಕೆ ನಾವೇ ಕಾರಣರಾದಂತಲ್ಲವೇ ?

ಆಮಿಷಗಳಿಗೆ ಬಲಿಯಾಗುತ್ತಿರುವ ಮತದಾರರುಗಳು ಇರುವ ತನಕ ಭ್ರಷ್ಟ ರಾಜಕಾರಣಿಗಳನ್ನು ದೂಷಿಸುವ ನೈತಿಕತೆ ನಮ್ಮಲ್ಲಿದೆಯೇ? ಇದು ಪ್ರತಿ ಐದು ವರ್ಷಗಳಿಗೊಮ್ಮೆ ಈ ಭ್ರಷ್ಟಾಚಾರ ಹೆಚ್ಚಾಗುತ್ತಿದ್ದರೆ, ಇದಕ್ಕೆ ಅಂತ್ಯ ಹಾಡುವವರು ಯಾರು ?

ಇದು ಒಂದು ಪ್ರಜಾಪ್ರಭುತ್ವದ ಅವನತಿಯ ರೋಗ ಲಕ್ಷಣವಲ್ಲವೇ ?

ಇವೆಲ್ಲವೂ ಕೋಳಿ ಮೊದಲೋ? ಮೊಟ್ಟೆ ಮೊದಲೋ ? ಎಂಬ ವಿತಂಡವಾದದ ಪ್ರಶ್ನೆಗಳಾಗಿವೆ. ಈ ಪ್ರಶ್ನೆಗಳಿಗೆ ಮತದಾರರೇ ಉತ್ತರಿಸಬೇಕು.

ಎಲ್ಲರಿಗೂ ಮತದಾನದ ಮೌಲ್ಯದ ಅರಿವು ಮೂಡಬೇಕು. ಭ್ರಷ್ಟಾಚಾರ ನಾಶವಾಗಬೇಕು. ಪ್ರಜ್ಞಾವಂತ, ಸುಶಿಕ್ಷಿತ ನಾಗರಿಕ ಸಮಾಜ ಕಾರ್ಯೋನ್ಮುಖವಾಗಬೇಕು. ಜನಸಾಮಾನ್ಯರ ಬಳಿ ಹಣ ಓಡಾಡುತ್ತಿಲ್ಲ. ಓಟಿಗಾಗಿ ನೀಡುವ ನೋಟು ಸುಲಭವಾಗಿ ಒದಗುವ ಹಣ, ಬಾಹ್ಯ ಸಮಾಜದಲ್ಲಿ, ಆಡಳಿತ ವ್ಯವಸ್ಥೆಯಲ್ಲಿ, ಅಧಿಕಾರ ಕೇಂದ್ರಗಳಲ್ಲಿ, ರಾಜಕೀಯ ವಲಯದಲ್ಲಿ, ಭ್ರಷ್ಟಾಚಾರ ಅಂತ್ಯವಾಗದ ಹೊರತು, ಇದು ಕೂಡ ಅಂತ್ಯವಾಗುವುದಿಲ್ಲ. ಎಲ್ಲರೂ ಒಂದು ಮನ್ವಂತರಕ್ಕಾಗಿ ಆಶಿಸಬೇಕು. ಹೊಸ ಯುಗಕ್ಕಾಗಿ ಶ್ರಮಿಸಬೇಕು. ಸಮಾಜವಾದದತ್ತ ಸಾಗಬೇಕು. ಪ್ರಜಾಪ್ರಭುತ್ವದ ಅರ್ಥ, ಸಂವಿಧಾನದ ಗೌರವ ಉಳಿಸಬೇಕು.

ಜೈ ಹಿಂದ್

**- ಡಾ. ಅನಿತಾ ಹೆಚ್. ದೊಡ್ಡ ಗೌಡರ್**
ದಾವಣಗೆರೆ. ಮೊ: 99021 98655

## ನನ್ನ ಓಟು - ನನ್ನ ಹಕ್ಕು

ಭಾರತೀಯಳು ನಾನೆಂಬುದೇ ನನಗೆ ಹೆಮ್ಮೆ
ನೆನಪಿನೆಳೆಯಲ್ಲಿ ಸಾಗೋಣ ನಾವೆಲ್ಲಾ ಒಮ್ಮೆ
ಪ್ರಜಾಪ್ರಭುತ್ವದ ಬಹುದೊಡ್ಡ ದೇಶವು
ಜಗಕೆಲ್ಲಾ ಮಾದರಿಯು ನಮ್ಮ ಸಂದೇಶವು

ಜನರಿಂದ, ಜನರಿಗಾಗಿ, ಜನರಿಗೋಸ್ಕರ
ತುಂಬಿಹುದು ಅದರಲ್ಲಿ ನೀತಿ, ಸಂಸ್ಕಾರ
ಪ್ರಜಾಪ್ರಭುತ್ವವೇ ನಿರ್ಣಯದ ಸಂವಿಧಾನ
ತಪ್ಪದೇ ಮಾಡೋಣ ನಾವೆಲ್ಲರೂ ಮತದಾನ

ಪ್ರಜಾಪ್ರಭುತ್ವದ ಸದೃಢ ಸಂಕಲ್ಪದಲ್ಲಿ
ನನ್ನ ಓಟು-ನನ್ನ ಹಕ್ಕು ಶಕ್ತಿ-ಭಕ್ತಿಯಲ್ಲಿ
ಭಾರತಾಂಭೆಯ ಸಮೃದ್ಧ ಅಭಿವೃದ್ಧಿಗಾಗಿ
ತಪ್ಪದೇ ಮತ ಚಲಾಯಿಸೋಣ ಎಲ್ಲರಿಗಾಗಿ

ಮೂಲಭೂತ ಹಕ್ಕು ಸಂವಿಧಾನದಡಿಯಲ್ಲಿ
ಶ್ರೇಷ್ಠದಾನ ಮತದಾನ ದೇಶದ ಏಳ್ಗೆಗಾಗಿ
ನನ್ನ ಓಟು-ನನ್ನ ಹಕ್ಕು ಎಂದೆನಗೆ ಮಾನ್ಯ
ಮತದಾನ ಮಾಡದೇ ಮಾಡಲಾರೆ ಅವಮಾನ

**- ವೀಣಾ ಕೃಷ್ಣಮೂರ್ತಿ**, ದಾವಣಗೆರೆ.

## ಮತದಾನ ಮಾಡಿದವರಿಗೆ ಒಂದು ದಿನ ಹೆಚ್ಚುವರಿ ವೇತನ

ದಾವಣಗೆರೆ, ಮೇ 9- ನಗರದ ಸರ್.ಎಂ.ವಿ. ಕಾಲೇಜಿನ ಸಿಬ್ಬಂದಿಗಳಿಗೆ ಒಂದು ದಿನದ ವೇತನವನ್ನು ಹೆಚ್ಚುವರಿಯಾಗಿ ನೀಡುವ ಮೂಲಕ ಮತದಾನ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ಎಸ್.ಜೆ. ಶ್ರೀಧರ್ ಅವರು, ಸಂಸ್ಥೆಯ ಎಲ್ಲಾ ಉಪನ್ಯಾಸಕರು, ಸಿಬ್ಬಂದಿಯವರು ಕಡ್ಡಾಯವಾಗಿ ಮತದಾನ ಮಾಡಬೇಕೆಂದು ಮನವಿ ಮಾಡಿದರು. ಕಾಲೇಜಿನ 400 ಕ್ಕೂ ಹೆಚ್ಚು ಸಿಬ್ಬಂದಿಗೂ ಒಂದು ದಿನದ ವೇತನವನ್ನು ಮತದಾನ ಮಾಡಿ ಬಂದವರಿಗೆ ನೀಡುವುದಾಗಿ ಘೋಷಿಸಿದರು. ತನ್ಮೂಲಕ ಖಾಸಗಿ ಸಂಸ್ಥೆಗಳಲ್ಲಿ ಮತದಾನ ಮಾಡಲು ಉತ್ತೇಜನ ನೀಡುವ ಮೂಲಕ ಎಲ್ಲರಿಗೂ ಮಾದರಿಯಾದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಡಾ. ರಾಜೇಂದ್ರ ನಾಯ್ದು, ನಿರ್ದೇಶಕರಾದ ಸೈಯದ್ ಷಂಷೀರ್, ಸುರೇಶ್, ಪ್ರದೀಪ್, ಪದ್ಮನಾಭ, ಜಗನ್‌ಮೋಹನರಾವ್ ಸೇರಿದಂತೆ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಮ್ಮ ಮತ, ನಮ್ಮ ಆಯ್ಕೆ, ನಮ್ಮ ಭವಿಷ್ಯ...

ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರವೇ ಆಡಳಿತ ನಡೆಸುವ ಬಲಿಷ್ಠ ಪ್ರಜಾಪ್ರಭುತ್ವ ಹೊಂದಿರುವ ಭಾರತ. ಇಲ್ಲಿ ಪ್ರಜೆಗಳೇ ಪ್ರಭುಗಳು. ಮತದಾರನೇ ಪ್ರಜಾಪ್ರಭುತ್ವದ ಬಲಿಷ್ಟ ಬೇರು. ಜಾತಿ, ಮತ, ಪಂಥ, ಧರ್ಮ, ಜನಾಂಗ, ಬಡವ-ಬಲ್ಲಿದ, ಅಕ್ಷರಸ್ಥೆ, ಅನಕ್ಷರಸ್ಥೆ, ಅಂಗವಿಕಲ, ವಯೋವೃದ್ಧ ಹೀಗೆ ಯಾವುದೇ ಬೇಧ-ಭಾವವಿಲ್ಲದೆ ಎಲ್ಲರೂ ಮತದಾನ ಮಾಡಲು ಸಮಾನ ಅವಕಾಶ ಮತ್ತು ಸಮಾನ ಮತ ಮೌಲ್ಯ ಹೊಂದಿದ್ದಾರೆ.

ಪ್ರಜಾಪ್ರಭುತ್ವ ಉಳಿಯುವುದು ಕೇವಲ ಮತದಾರನ ಮತದಾನದಿಂದಲ್ಲ, ಅವರಿಂದ ಆಯ್ಕೆಯಾದ ಜನಪ್ರತಿನಿಧಿಗಳು ಸಮಾನತೆ, ಸಾಮಾಜಿಕ ನ್ಯಾಯ, ಅಭಿವ್ಯಕ್ತಿ ಸ್ವಾತಂತ್ರ, ಸೌಹಾರ್ದ ಮತ್ತು ಸಂವಿಧಾನದ ಆಶಯಗಳ ನೆಲೆಗಟ್ಟಿನ ಮೇಲೆ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಯನ್ನು ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸಿದಾಗ ಮಾತ್ರ ಸಾಧ್ಯ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರ ನುಡಿಯಂತೆ "ಬದುಕಲು ರಾಜಕೀಯಕ್ಕೆ ಬರಬೇಡಿ, ಜನರ ಬದುಕನ್ನು ಬದಲಾಯಿಸಲು ಬನ್ನಿ. ಏಕೆಂದರೆ ರಾಜಕೀಯವು ಉದ್ಯೋಗವಲ್ಲ, ಸಾಮಾಜಿಕ ಜವಾಬ್ದಾರಿ". ಆದ್ದರಿಂದ ನದಿಯೇ ಇಲ್ಲದ ಕಡೆ ಸೇತುವೆ ಕಟ್ಟುವ ಭರವಸೆ ನೀಡಬಲ್ಲ ರಾಜಕಾರಣಿಗಳನ್ನು ಬಿಟ್ಟು ದೃಢ ಮನಸ್ಸಿನ ದೂರದೃಷ್ಟಿವುಳ್ಳ ತನ್ನ ಹೊಣೆಗಾರಿಕೆಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಬಲ್ಲ ಆಡಳಿತವನ್ನು ನಿರೂಪಿಸುವ ಮತ್ತು ಅಸ್ತಿತ್ವಕ್ಕೆ ತರುವ ಅಧಿಕಾರ ಮತದಾರನ ಕೈಯ್ಯಲ್ಲಿದೆ. ವಿನ್ಸೆಂಟ್ ಚರ್ಚಿಲ್‌ರವರ ಮಾತನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ಕಾಲಕಾಲಕ್ಕೆ ಸುಧಾರಣೆಗೊಳ್ಳದಿದ್ದರೆ ಸರಿಪಡಿಸಿಕೊಳ್ಳದೆ ಹೋದರೆ ಪ್ರಜಾಪ್ರಭುತ್ವ ಬೇರಲ್ಲ ಪ್ರಭುತ್ವಕ್ಕಿಂತಲೂ ಅತ್ಯಂತ ಕೆಟ್ಟದಾಗಿರುತ್ತದೆ.

ಚುನಾವಣೆ ಎನ್ನುವುದು ಜನತಂತ್ರದ ಜೀವಾಳ. ಒಬ್ಬ ಒಳ್ಳೆಯ ಆಡಳಿತಗಾರರನ್ನು ಆಯ್ಕೆ ಮಾಡುವ ಗುರುತರ ಜವಾಬ್ದಾರಿ ನಮ್ಮ, ನಿಮ್ಮ ಮುಂದಿದೆ. ಜವಾಬ್ದಾರಿಯುತ ನಾಗರಿಕರಾಗಿ ಮತದಾನ ಮಾಡಿ ನಿಮ್ಮ ಪಾತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವ ಒಬ್ಬ ಸರ್ವೋತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅವಕಾಶ ಬಂದಿದೆ.

ಆಂಗ್ಲ ಭಾಷೆಯಲ್ಲಿ ಒಂದು ಮಾತು ಇದೆ



"Bad Politician are created by Good People, who do not vote". ಒಳ್ಳೆಯ ವ್ಯಕ್ತಿಗಳು ನಿರ್ಲಕ್ಷ ವಹಿಸಿದರೆ ಅಯೋಗ್ಯರು ಆಯ್ಕೆಯಾಗಿ ನಮ್ಮ ಬದುಕು ಮತ್ತು ಅಭಿವೃದ್ಧಿ ಕಪಿ ಮುಷ್ಠಿಯಲ್ಲಿ ಸಿಲುಕಿದಂತಾಗುತ್ತದೆ. ಕೆಟ್ಟ ವ್ಯಕ್ತಿಗಳು ಆಯ್ಕೆಯಾಗಿ ಜನರ ಮಧ್ಯೆ ಕಲಹ ತಂದಿಟ್ಟು, ರೊಚ್ಚಿಗೆಬ್ಬಿಸಿ, ಸಾಮಾಜಿಕ ಶಾಂತಿಯನ್ನು ಕದಡುವ, ಮತಕ್ಷೇತ್ರವನ್ನು ರಣರಂಗವನ್ನಾಗಿ ಮಾಡುವ ರಾಜಕಾರಣಿಗಳಿಗೆ ನಾವು ಹಂಸಕ್ಷೀರ ನ್ಯಾಯ, ತತ್ವದ ಮೇಲೆ ಪ್ರಬುದ್ಧತೆಯಿಂದ, ಜಾಗರೂಕತೆಯಿಂದ, ಸ್ವಯಂ ಪ್ರೇರಿತರಾಗಿ ಪ್ರತಿಯೊಬ್ಬರು ಮತದಾನ ಮಾಡಿ, ಉತ್ತರ ಕೊಡಿ.

ಸಾಮಾನ್ಯ ಜನರಲ್ಲಿ ಚುನಾವಣೆ ನಮಗೆ ಸಂಬಂಧಿಸಿದ್ದಲ್ಲ ಎಂಬ ಉದಾಸೀನತೆ ಮತ್ತು ಬೇಜವಾಬ್ದಾರಿ ಇದೆ. ಇಂತಹ ಧೋರಣೆ ತುಂಬಾ ಅಪಾಯಕಾರಿ, ಆತಂಕಕಾರಿ ಮತ್ತು ಆಘಾತಕಾರಿಯೂ ಹೌದು. ನಾವು ಮತದಾನ ಮಾಡದಿದ್ದಲ್ಲಿ ಅಯೋಗ್ಯರು ಆಯ್ಕೆಯಾಗಿ, ನಮ್ಮ ಬದುಕನ್ನು ಅಯೋಗ್ಯರ ಕೈಗೆ ನೀಡಿದಂತಾಗುತ್ತದೆ. ಮತದಾರನ ವೈಫಲ್ಯವೂ ಪ್ರಜಾಪ್ರಭುತ್ವದ ವೈಫಲ್ಯವಾಗುತ್ತದೆ. ಅಂತಹ ಸಂದರ್ಭವನ್ನು ನಾವೀಗ ಎದುರಿಸುತ್ತಿದ್ದೇವೆ. ಇಲ್ಲಿ ಸರ್ವಜ್ಞನ ನುಡಿ ಪ್ರಸ್ತುತವೆನಿಸುತ್ತದೆ

***'ಹಿರಿತನವು ಹೇಡಿಂಗೆ***
***ಗುರುತನವು ಮೂಡಂಗೆ***
***ದೊರೆತನವು ನಾಡ ನೀಚಂಗೆ ದೊರಕಿದರೆ***
***ಧರೆಗೆ ಕೇಡಂದ - ಸರ್ವಜ್ಞ.***

ಆದ್ದರಿಂದ ಮಗನನ್ನಾಗಲೀ, ಮಗಳನ್ನಾಗಲೀ ಅಯೋಗ್ಯರಿಗೆ ಕೊಡಬಾರದು. ವಿಶ್ವದ ರಾಜನೀತಿ ತಜ್ಞರೆಲ್ಲರ "The price of liberty is eternal vigilance" ಮಾತು ಪ್ರಸ್ತುತವೆನಿಸುತ್ತಿದೆ. ಪ್ರಸ್ತುತ ಚುನಾವಣೆಯಲ್ಲಿ ಎಚ್ಚರಿಕೆಯಿಂದ ಮತದಾರ ಯಾವುದೇ ಆಸೆ-ಆಮಿಷಗಳಿಗೆ ಒಳಗಾಗದೆ, ಭಾವುಕತೆಗೆ ಒಳಗಾಗಿ ಭಾವನೆಗಳ ಮಹಾಪೂರದಲ್ಲಿ ಕೊಚ್ಚಿಹೋಗುವ ಪ್ರವೃತ್ತಿಗೆ ಕಡಿವಾಣ ಹಾಕಿ ತಮ್ಮ ಮತವನ್ನು ಆತ್ಮಸಾಕ್ಷಿಯಿಂದ ಚಲಾಯಿಸಬೇಕು.

ಸ್ಪರ್ಧಿಗಳೂ ಸಹ ಪ್ರಜಾಪ್ರಭುತ್ವದ ಮೌಲ್ಯಗಳನ್ನು, ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಬೇಕು. ವೈಯಕ್ತಿಕ ನಿಂದನೆ, ಚಾರಿತ್ರ್ಯ ವಧೆ, ನಾಲಿಗೆ ಹರಿಬಿಟ್ಟು ಬೇಕಾಬಿಟ್ಟಿ ಮಾತನಾಡುವುದು ಸಲ್ಲದು. ಸೈದ್ಧಾಂತಿಕ ಹಾಗು ತಾತ್ವಿಕ ನೆಲೆಗಟ್ಟಿನ ಮೇಲೆ ಪ್ರಚಾರ ಮತ್ತು ಚುನಾವಣೆಗಳು ನಡೆಯಬೇಕು.

ದಾವಣಗೆರೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಡ್ಡಾಯವಾಗಿ ಮತದಾನ ಮಾಡಲಿ, ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ "ನಮ್ಮ ನಡೆ ಮತಗಟ್ಟೆ ಕಡೆ" ಎಂಬ ಅಭಿಯಾನ ಹಾಗು ಮತ್ತಿತರ ಕಾರ್ಯಕ್ರಮಗಳು ನಡೆದಿರುವುದು ಪ್ರಸಂಶನೀಯ. ಇಂತಹ ಪವಿತ್ರ ಕಾರ್ಯದಲ್ಲಿ ಎಲ್ಲಾ ಪಕ್ಷಗಳು, ಅಭ್ಯರ್ಥಿಗಳು, ಮತದಾರರು ಹಾಗು ಸಂಘ-ಸಂಸ್ಥೆಗಳು ಒಗ್ಗೂಡಿ ಚುನಾವಣೆ ಆಯೋಗಕ್ಕೆ ನೆರವಾಗಬೇಕು.

ಸರ್ಕಾರದ ಮಟ್ಟದಲ್ಲಿ ನಿಮ್ಮನ್ನು ಪ್ರತಿನಿಧಿಸಲು, ನಿಮ್ಮ ಅಗತ್ಯತೆಗಳನ್ನು ಸರ್ಕಾರಕ್ಕೆ ತಿಳಿಸಲು ಒಬ್ಬ ಯೋಗ್ಯ ಪ್ರತಿನಿಧಿ ಬೇಕು. ಸಂವಿಧಾನ ನಮಗೆ ನೀಡಿರುವ ಪ್ರಬಲ ಅಸ್ತ್ರ ಮತದಾನ. ಸೂಕ್ತ ವ್ಯಕ್ತಿಗೆ ಮತ ನೀಡಿದರೆ ಮಾತ್ರ ನಮ್ಮ ಹಿತ ಮತ್ತು ಅಭಿವೃದ್ಧಿ ಸಾಧ್ಯ. ಆದ್ದರಿಂದ "ಹಿಂದಿನ ಅನುಭವ ಪ್ರಸ್ತುತ ಪ್ರಜ್ಞೆ ನಾಳಿನ ಪರಿಕಲ್ಪನೆ" ಹೊಂದಿರುವ ಅಭ್ಯರ್ಥಿ ನಿಮ್ಮ ಮತದ ಪ್ರಥಮ ಆದ್ಯತೆಯಾಗಬೇಕು.





ನಮ್ಮದೊಂದು ಮಾತು ನಮ್ಮ ಬದುಕಿಗೆ ನಾವೇ ಲೇಖಕರು. ನಮ್ಮ ಭವಿಷ್ಯದ ನಿರ್ಧಾರಕರು ನಾವೇ. ಆಗಾಗಿ ತಾವೆಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ, ಅದು "Right person in the Right place".

**-ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ**
**- ಐಗೂರು ಚಂದ್ರಶೇಖರ್**

# ಪ್ರಭುಗಳಿಂದ ಭವಿಷ್ಯದ ನಿರ್ಧಾರ

**(3ನೇ ಪುಟದಿಂದ)** ಮತಗಟ್ಟೆಗಳಲ್ಲಿ ಹೆಚ್ಚಿನ ಭದ್ರತೆಯ ಜತೆಗೆ ಸಿಸಿಟಿವಿ ಅಳವಡಿಸಿ ಹದ್ದಿನ ಕಣ್ಣಿಡಲಾಗಿದೆ.

ರಾಜ್ಯ ಸರ್ಕಾರಿ ನೌಕರರ ಜತೆಗೆ ಕೇಂದ್ರ ಸರ್ಕಾರಿ ನೌಕರರನ್ನೂ ಚುನಾವಣಾ ಕಾರ್ಯಕ್ಕೆ ಬಳಕೆ ಮಾಡಿಕೊಂಡಿದ್ದು, ವಿದ್ಯುನ್ಮಾನ ಮತ ಯಂತ್ರಗಳೊಂದಿಗೆ ತಮಗೆ ನಿಗದಿಪಡಿಸಿದ ಮತಗಟ್ಟೆಗಳಿಗೆ ಈಗಾಗಲೇ ತೆರಳಿದ್ದು, ಮತದಾನಕ್ಕೆ ಬೇಕಾದ ಅಗತ್ಯ ಸಿದ್ಧತೆ ಮಾಡಿಕೊಂಡಿದ್ದಾರೆ.

ಶಾಂತಿ ಮತ್ತು ಮುಕ್ತ ಚುನಾವಣೆ ನಡೆಸಲು ಎರಡು ಸಾವಿರಕ್ಕೂ ಹೆಚ್ಚು ಐಎಎಸ್ ಹಾಗೂ ಎಎಫ್‌ಎಸ್ ದರ್ಜೆಯ ಅಧಿಕಾರಿಗಳನ್ನು ವಿವಿಧ ಹಂತಗಳಲ್ಲಿ ನಿಯೋಜಿಸಲಾಗಿದೆ.

ಮತದಾನ ಮುಗಿದ ತಕ್ಷಣವೇ ಮತಯಂತ್ರಗಳನ್ನು ಆಯಾ ಕ್ಷೇತ್ರ ನಿಗದಿ ಸ್ಟ್ರಾಂಗ್ ರೂಂಗಳಿಗೆ ತಲುಪಿಸಿ ಮೇ 13 ರಂದು ಮತ ಎಣಿಕೆ ನಡೆಯುವವರೆಗೂ ಸೂಕ್ತ ಭದ್ರತೆ ಒದಗಿಸಲಾಗುತ್ತದೆ. ಮತದಾರರಿಗೆ ಅನುಕೂಲ ಮಾಡಿಕೊಡುವ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗೂ ಖಾಸಗಿ ವಲಯದ ಉದ್ಯೋಗಿಗಳಿಗೆ ವೇತನ ಸಹಿತ ರಜೆ ನೀಡಲಾಗಿದೆ.

ನಿನ್ನೆ ಸಂಜೆಯೇ ಬಹಿರಂಗ ಚುನಾವಣಾ ಪ್ರಚಾರ ಅಂತ್ಯಗೊಳಿಸಿದ ಬೆನ್ನಲ್ಲೇ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಹಾಗೆಯೇ ಮತಗಟ್ಟೆಯ ಸುತ್ತಲಿನ 100 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಅಭ್ಯರ್ಥಿಗಳು ತಮ್ಮ ಕೊನೆಯ ಹಂತದಲ್ಲಿ ಮತದಾರರನ್ನು ಓಲೈಸಿಕೊಳ್ಳಲು ನಾನಾ ರೀತಿಯ ಕಸರತ್ತು ನಡೆಸಿದ್ದಾರೆ.

## ಪಿ.ಬಿ. ರಸ್ತೆ ಅವೈಜ್ಞಾನಿಕ ನಿರ್ಮಾಣಕ್ಕೆ ಕನ್ನಡಿ ಹಿಡಿದ ಮಳೆ

### ಕೊಳಚೆ ನೀರಲ್ಲೂ ಸುಂದರವಾಗಿ ಕಾಣುವ ಕಟ್ಟಡದ ಪ್ರತಿಬಿಂಬ



ದಾವಣಗೆರೆ, ಮೇ 9- ಒಂದೆಡೆ ಚುನಾವಣಾ ಕಾವು, ಮತ್ತೊಂದೆಡೆ ಬಿರು ಬಿಸಿಲಿನ ಬೇಗೆ. ಇವೆರಡಕ್ಕೂ ತಂಪು ನೀಡಿದ್ದು ಮಂಗಳವಾರ ಮಧ್ಯಾಹ್ನ ಸುರಿದ ಮಳೆ.

ಒಂದೆಡೆ ಈ ಮಳೆ ಇಳೆಗೆ ತಂಪು ನೀಡಿತಾದರೂ, ದಾವಣಗೆರೆಯಲ್ಲಿ ನಡೆದ ಕೆಲವು ಅವೈಜ್ಞಾನಿಕ ರಸ್ತೆ ಕಾಮಗಾರಿಗಳಿಗೂ ಕನ್ನಡಿ ಹಿಡಿಯಿತು.

ಇದಕ್ಕೆ ಸಾಕ್ಷಿ ಎಂಬಂತೆ ನಗರದ ಪಿ.ಬಿ. ರಸ್ತೆಯಲ್ಲಿರುವ ಪೂಜಾ ಹೋಟೆಲ್ ಮುಂಭಾಗ ಮಧ್ಯಾಹ್ನ ಸುರಿದ ಮಳೆಯ ನೀರು ನಿಂತುಕೊಂಡಿತು. ಈ ನೀರಿನ ಮೇಲೆ ಸಂಚರಿಸುತ್ತಿದ್ದ ವಾಹನಗಳು ನೀರನ್ನು ಪಾದಚಾರಿಗಳಿಗೆ ಚಿಮ್ಮಿಸುತ್ತಾ ಹೋಗುತ್ತಿದ್ದವು.

ಅಲ್ಲಿ ನೋಡುತ್ತಿದ್ದ ಕೆಲವರಿಗೆ ಪೂಜಾ ಹೋಟೆಲ್ ಕೊಳಚೆ ನೀರಿನಲ್ಲಿ ಸುಂದರವಾಗಿ ಕಾಣುತ್ತಿತ್ತು. ಈ ಸೌಂದರ್ಯ ಸವಿಯಬೇಕೋ? ಅಥವಾ ಕೊಳಚೆ ನೀರು ನಿಲ್ಲಲು ಕಾರಣವಾದ ಅವೈಜ್ಞಾನಿಕ ಕಾಮಗಾರಿ ನಡೆಸಿದ ಎಂಜಿನಿಯರ್‌ಗಳನ್ನು ಅಥವಾ ಜನಪ್ರತಿನಿಧಿಗಳನ್ನು ಬೈಯ್ಯಬೇಕೋ ಎಂಬ ದ್ವಂದ್ವ ನಿಲುವು ಅಲ್ಲಿದ್ದವರದ್ದಾಗಿತ್ತು.

ಅಂದಹಾಗೆ 'ನಿಂತ ಕೊಳೆ ನೀರಲ್ಲಿ ಸುಂದರ ಪ್ರತಿ ಬಿಂಬ.' ಮತ್ತೆ ಮಳೆ ಬಂದರೆ ಸುಂದರ ಚಿತ್ರಗಳ ಸೆರೆ ಹಿಡಿಯಲು ಬನ್ನಿ' ಎಂಬ ಶೀರ್ಷಿಕೆಯುಳ್ಳ ಚಿತ್ರಗಳು ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿವೆ. ಅರ್ಧ ಗಂಟೆ ಸುರಿದ ಮಳೆಯ ನೀರು ಸರಾಗವಾಗಿ ಹರಿದು ಹೋಗದಂತೆ ಈ ರಸ್ತೆ ನಿರ್ಮಿಸಿದ ಮಹಾನುಭಾವನಿಗೆ ಸ್ಥಳೀಯ ಜನತೆ ಶಾಪ ಹಾಕುತ್ತಿದ್ದಾರೆ. ಮುಂದಾದರೂ ರಸ್ತೆಗಳು, ಚರಂಡಿಗಳು ವೈಜ್ಞಾನಿಕವಾಗಿ ನಿರ್ಮಾಣವಾಗಲಿ ಎಂಬುದು ದೇವನಗರಿಯ ನಾಗರಿಕರ ಸಲಹೆ.

## ವಿದ್ಯಾರ್ಥಿಗಳ ಮತದಾನ ಜಾಗೃತಿ ಜಾಥಾ



ದಾವಣಗೆರೆ, ಮೇ 9- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸೂಚನೆ ಮೇರೆಗೆ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ನಗರದಲ್ಲಿ 'ನಮ್ಮ ನಡೆ ಮತಗಟ್ಟೆ ಕಡೆ' ಎಂಬ ಘೋಷವಾಕ್ಯದೊಂದಿಗೆ ನಡೆಸಿದ ಸ್ವೀಪ್ ಮತದಾರರ ಜಾಗೃತಿ ಕಾರ್ಯಕ್ರಮಕ್ಕೆ ಬಿಇಓ ದಾರುಕೇಶ್ ಚಾಲನೆ ನೀಡಿದರು. ಇಲ್ಲಿನ ಮಾಗನೂರು ಬಸಪ್ಪ ಕಾಲೇಜಿನಿಂದ ಮತದಾರರ ಜಾಥಾ ನಡೆಸಿ, ಪ್ರತಿಜ್ಞಾ ವಿಧಿ ಬೋಧಿಸಿ, ಮತದಾನ ಜಾಗೃತಿ ಹಾಡುಗಳಿಗೆ ಹೆಜ್ಜೆ ಹಾಕುವ ಮೂಲಕ ಮತದಾನದ ಅರಿವು ಮೂಡಿಸಲಾಯಿತು. ಈ ಸಂದರ್ಭದಲ್ಲಿ ನಿಲಯಪಾಲಕರಾದ ಕೆ.ಸಿ. ಸುಧಾ, ಬಿ.ಕೆ.ಶಶಿಕಲಾ ಮತ್ತಿತರರು ಪಾಲ್ಗೊಂಡಿದ್ದರು.

## ಎ.ಆರ್.ಜಿ. ಕಾಲೇಜಿನಿಂದ ಮತದಾನ ಜಾಗೃತಿ ಅಭಿಯಾನ




ದಾವಣಗೆರೆ, ಮೇ 9- ಬಾಪೂಜಿ ವಿದ್ಯಾಸಂಸ್ಥೆಯ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನ ಮತದಾನ ಸಾಕ್ಷರತಾ ಸಂಘ, ರಾಷ್ಟ್ರೀಯ ಸೇವಾ ಯೋಜನೆ, ಎನ್‌ಸಿಸಿ ವತಿಯಿಂದ ಮತದಾನ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದ ಈ ಅಭಿಯಾನ ಕಾಲೇಜಿನಿಂದ ಹೊರಟು, ಡೆಂಟಲ್ ಕಾಲೇಜು ರಸ್ತೆ ಮೂಲಕವಾಗಿ ಗುಂಡಿ ಮಹದೇವಪ್ಪ ವೃತ್ತದಲ್ಲಿ ಮತದಾನದ ಘೋಷಣೆಗಳನ್ನು ಹೇಳುತ್ತಾ, ಮಾನವ ಸರಪಳಿ ರಚಿಸಿ, ನಾಗರಿಕರಿಗೆ ಮತದಾನದ ಮಹತ್ವವನ್ನು ಮನವರಿಕೆ ಮಾಡುವ ಮೂಲಕ ಅಭಿಯಾನವನ್ನು ಯಶಸ್ವಿಗೊಳಿಸಿದರು.

## ಮತದಾನ ಜಾಗೃತಿ ಅಭಿಯಾನ



ದಾವಣಗೆರೆ, ಮೇ 9- ಭಾರತೀಯ ಚುನಾವಣಾ ಆಯೋಗದ ಮತದಾನ ಜಾಗೃತಿ ಅಭಿಯಾನಕ್ಕೆ ಹೋಟೆಲ್ ಉದ್ದಿಮೆದಾರರ ಸಂಘ ಕೈ ಜೋಡಿಸಿದೆ.

ಪಾಲಿಕೆಯ ಆಯುಕ್ತರಿಂದ ಮತದಾನ ಜಾಗೃತಿ ಅಭಿಯಾನದ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಿ, ಪಾಲಿಕೆಯ ಆರೋಗ್ಯ ಸಿಬ್ಬಂದಿಗಳ ಸಹಕಾರದೊಂದಿಗೆ ಜನನಿಬಿಡ ಸ್ಥಳ, ಪ್ರಮುಖ ವೃತ್ತಗಳಲ್ಲಿ ಪೋಸ್ಟರ್‌ಗಳನ್ನು ಅಳವಡಿಸುವ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸಲಾಯಿತು.

ಹೋಟೆಲ್ ಉದ್ದಿಮೆದಾರರ ಸಂಘದ ಅಧ್ಯಕ್ಷ ಮೋತಿ ಆರ್. ಪರಮೇಶ್ವರ್, ಕಾರ್ಯದರ್ಶಿ ಬಿ.ಕೆ. ಸುಬ್ರಹ್ಮಣ್ಯ, ಕಾರ್ಯಕಾರಿ ಸಮಿತಿ ಸದಸ್ಯ ರಾಕೇಶ್ ಮತ್ತಿತರರು ಮತದಾರರ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿದ್ದರು.

## ಹೇಳಿಕೆ ನೀಡದಂತೆ ನಿರ್ಬಂಧ

**(3ನೇ ಪುಟದಿಂದ)** ಅಮಾನುಲ್ಲಾ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಮುಸ್ಲಿಂ ಕಕ್ಷಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ದುಶ್ಯಂತ್ ದಾವೆ, ಪ್ರತಿದಿನ ಕೇಂದ್ರ ಗೃಹ ಸಚಿವರು ಕರ್ನಾಟಕದಲ್ಲಿ ಮೀಸಲಾತಿ ವಾಪಸ್ ಪಡೆದಿರುವ ಬಗ್ಗೆ ಹೇಳಿಕೆ ನೀಡುತ್ತಿದ್ದಾರೆ. ಈ ರೀತಿಯ ಹೇಳಿಕೆ ಏಕೆ ನೀಡಬೇಕು? ಎಂದು ಪ್ರಶ್ನಿಸಿದರು.

ಕರ್ನಾಟಕ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ ಮಾತನಾಡಿ, ಧರ್ಮ ಆಧರಿತ ಮೀಸಲಾತಿ ಇರಬಾರದು ಎಂದು ಹೇಳುವುದರಲ್ಲಿ ತಪ್ಪಿಲ್ಲ. ಇದು ವಾಸ್ತವಾಂಶವೂ ಆಗಿದೆ ಎಂದರು. ಆಗ ಮಾತನಾಡಿದ ನ್ಯಾಯಮೂರ್ತಿ ಜೋಸೆಫ್, ನ್ಯಾಯಾಲಯಕ್ಕೆ ಈ ಹೇಳಿಕೆಯ ಬಗ್ಗೆ ಆಕ್ಷೇಪವಿಲ್ಲ. ಆದರೆ, ನ್ಯಾಯಾಂಗದ ಎದುರಿರುವ ವಿಷಯದ ಬಗ್ಗೆ ಹೊರಗಡೆ ಮಾತನಾಡುವುದು ಸೂಕ್ತವಲ್ಲ ಎಂದು ಹೇಳಿದರು.

## ಅಮಿತ್ ಶಾ - ಶಿವಕುಮಾರ್ ರಾಜನಹಳ್ಳಿ ಭೇಟಿ



ದಾವಣಗೆರೆ, ಮೇ 9- ಕಳೆದ ವಾರ ನಗರಕ್ಕೆ ಆಗಮಿಸಿದ್ದ ಕೇಂದ್ರ ಸರ್ಕಾರದ ಗೃಹ ಸಚಿವ ಅಮಿತ್ ಶಾ ಅವರು ಜಿಎಂಐಟಿ ಅತಿಥಿ ಗೃಹದಲ್ಲಿ ವಿಶ್ರಾಂತಿ ಪಡೆಯುವ ಸಂದರ್ಭದಲ್ಲಿ ದೂಡಾ ಮಾಜಿ ಅಧ್ಯಕ್ಷ ಶಿವಕುಮಾರ್ ರಾಜನಹಳ್ಳಿ ಭೇಟಿ ಮಾಡಿದ್ದರು. ಪಕ್ಷದ ಸಂಘಟನೆ ಮತ್ತು ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಸಂಬಂಧಿಸಿದಂತೆ ಅಮಿತ್ ಶಾ ಅವರು ಶಿವಕುಮಾರ್ ರಾಜನಹಳ್ಳಿ ಮತ್ತು ಇತರರಿಗೆ ಸಲಹೆ - ಸೂಚನೆ ನೀಡಿದರು.

# ಮತದಾನ ಪವಿತ್ರ ಕಾರ್ಯ, ಮರೆಯದೆ ಹಕ್ಕು ಚಲಾಯಿಸಿ

## ದಾವಣಗೆರೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಮತದಾನದ ಜಾಗೃತಿ



ದಾವಣಗೆರೆ, ಮೇ 9- ಮತದಾನ ಪವಿತ್ರ ಕಾರ್ಯವಾಗಿದ್ದು, ಸಾರ್ವಜನಿಕರು ತಪ್ಪದೇ ತಮ್ಮ ಹಕ್ಕು ಚಲಾಯಿಸಿ ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕೆಂದು 'ಪ್ರಜಾವಾಣಿ' ಪತ್ರಿಕೆ ಸ್ಥಾನಿಕ ಸಂಪಾದಕ ಸಿದ್ದಯ್ಯ ಹಿರೇಮಠ್ ಮನವಿ ಮಾಡಿದರು.

ದಾವಣಗೆರೆ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದಿಂದ ನಗರದ ಶ್ರೀ ಜಯದೇವ ಮುರುಘ ರಾಜೇಂದ್ರ ವೃತ್ತದಲ್ಲಿ ನಿನ್ನೆ ಆಯೋಜಿಸಿದ್ದ ಮತದಾನ ಜಾಗೃತಿ ಕಾರ್ಯಕ್ರಮವನ್ನು ಸಾರ್ವಜನಿಕರಿಗೆ ಗುಲಾಬಿ ಹೂ ಮತ್ತು ಚಾಕೋಲೇಟ್ ನೀಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ಗಟ್ಟಿಗೊಂಡು ಸರ್ವರಿಗೂ ನ್ಯಾಯ ಸಿಗಬೇಕಾದರೆ ಪ್ರತಿಯೊಬ್ಬರೂ ಮತದಾನ ಕಾರ್ಯದಲ್ಲಿ ಭಾಗಿಯಾಗಬೇಕು. ಮತದಾನ ನಮಗೆ ಸಂವಿಧಾನ ನೀಡಿದ ಅಸ್ತ್ರವಾಗಿದ್ದು, ಶ್ರೇಷ್ಠ ವ್ಯಕ್ತಿಯನ್ನು ಆಯ್ಕೆ ಮಾಡಬೇಕು ಎಂದು ಅವರು ಹೇಳಿದರು.

ವರದಿಗಾರರ ಕೂಟದ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ್ ಕಬ್ಬೂರು ಮಾತನಾಡಿ, ಸರ್ಕಾರ ಮತದಾನ ಜಾಗೃತಿಗಾಗಿ ಎರಡು ದಶಕದಿಂದ ಸಾಕಷ್ಟು ಕಾರ್ಯಕ್ರಮ ಆಯೋಜಿಸಿದ್ದರೂ ಶೇಕಡ ನೂರು ಮತದಾನದ ಗುರಿ ಮುಟ್ಟಲು ಸಾಧ್ಯವಾಗುತ್ತಿಲ್ಲ. ಸಂವಿಧಾನದ ಲಾಭ ಸರ್ವರಿಗೂ ದೊರೆಯಬೇಕಾದರೆ ಪ್ರತಿಯೊಬ್ಬರೂ ಕಡ್ಡಾಯವಾಗಿ ಅರ್ಹ ಅಭ್ಯರ್ಥಿಗೆ ಮತದಾನ ಮಾಡಬೇಕು ಎಂದು ತಿಳಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಸುಶಿಕ್ಷಿತರೇ ಮತದಾನ ಕರ್ತವ್ಯ ಪಾಲನೆ ಮಾಡದಿರುವುದು ಶೋಚನೀಯ ಸಂಗತಿ. ಪ್ರಜಾಪ್ರಭುತ್ವ ಅರ್ಥ ಪೂರ್ಣವಾಗಬೇಕಾದರೆ ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡ ಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ಕಾರ್ಯಕ್ರಮ ನಿರ್ವಹಿಸಿದರು. ಖಜಾಂಚಿ ಎನ್.ವಿ. ಬದ್ರಿನಾಥ್, ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ, ಉಪಾಧ್ಯಕ್ಷ ಆರ್.ಎಸ್. ತಿಪ್ಪೇಸ್ವಾಮಿ, ಕಾರ್ಯದರ್ಶಿ ಜಿ.ಎಸ್. ವೀರೇಶ್, ನಿರ್ದೇಶಕರುಗಳಾದ ಎನ್. ಕೃಷ್ಣೋಜಿರಾವ್, ಬಿ.ಎಸ್. ಮುದ್ದಯ್ಯ, ಚನ್ನವೀರಯ್ಯ, ಬಿ.ವಿ. ಅನಿಲ್‌ಕುಮಾರ್, ಎ.ಬಿ. ರುದ್ರಮ್ಮ ಶಿವಮೂರ್ತಿ, ಮಂಜುನಾಥ್, ಛಾಯಾಗ್ರಾಹಕರಾದ ವಿವೇಕಾನಂದ ಬದ್ದಿ, ಮೊಹಮ್ಮದ್ ರಫೀಕ್, ಸತೀಶ್, ಮಂಜುನಾಥ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮತದಾನ ಮಾಡಿದವರಿಗೆ ಕಿವಿ, ಗಂಟಲು, ಮೂಗು ಉಚಿತ ಪರೀಕ್ಷೆ



ದಾವಣಗೆರೆ, ಮೇ 9- ವಿಧಾನಸಭೆ ಚುನಾವಣೆಯಲ್ಲಿ ಮತದಾನ ಮಾಡಿದವರಿಗೆ ಇಎನ್‌ಟಿ ತಜ್ಞ ಡಾ. ಎ.ಎಂ. ಶಿವಕುಮಾರ್ ಕ್ಲಿನಿಕ್‌ನಲ್ಲಿ ನಾಳೆ ದಿನಾಂಕ 10 ರಿಂದ 15 ರವರೆಗೆ ಉಚಿತವಾಗಿ ಕಿವಿ, ಮೂಗು, ಗಂಟಲು ಪರೀಕ್ಷೆ ಮಾಡಲಾಗುತ್ತದೆ ಎಂದು ಇಎನ್‌ಟಿ ತಜ್ಞ ಡಾ.ಎ.ಎಂ. ಶಿವಕುಮಾರ್ ತಿಳಿಸಿದ್ದಾರೆ. ಮತದಾನ ಮಾಡಿದವರು ನಾಳೆ ದಿನಾಂಕ 10ರಿಂದ ಇದೇ ದಿನಾಂಕ 15 ರವರೆಗೆ ಪ್ರತಿದಿನ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2.30 ರವರೆಗೆ ಉಚಿತ ಪರೀಕ್ಷೆ ಮಾಡಿಸಿಕೊಳ್ಳಬಹುದು. ವಿವರಕ್ಕೆ ಸಂಪರ್ಕಿಸಿ : ಮೊ: 99013 13330.

## ಹರಿಹರ : 228 ಮತಗಟ್ಟೆಗಳಿಗೆ ಸಿಬ್ಬಂದಿಗಳ ರವಾನೆ

**(3ನೇ ಪುಟದಿಂದ)** ಸಾವಿರದ 517 ಮತದಾರರಿದ್ದಾರೆ. ಇಂದು ಬುಧವಾರ ಬೆಳಗ್ಗೆ 7 ಗಂಟೆಯಿಂದ ಮತದಾನ ಪ್ರಕ್ರಿಯೆ ಪ್ರಾರಂಭವಾಗುತ್ತದೆ ಎಂದರು. ತಾಲ್ಲೂಕಿನ 228 ಬೂತ್‌ನಲ್ಲಿ ಮತದಾನ ನಡೆಯಲಿದ್ದು, ಒಂದು ಮತಗಟ್ಟೆಗೆ 4 ಸಿಬ್ಬಂದಿಗಳು, 45 ಟೀಮ್ ರಿಜರ್ವರ್, 48 ಮೈಕ್ರೋ ಅಬ್ಸರ್ವರ್ ಹಾಗೂ ಪಿಆರ್‌ಓ, ಎಪಿಆರ್ ಓ, ಪಿಓ ಸೇರಿದಂತೆ ಒಟ್ಟು 1800 ಚುನಾವಣೆ ಸಿಬ್ಬಂದಿಗಳಿದ್ದಾರೆ. 28 ಬಸ್, 12 ಮಿನಿ ಬಸ್, 4 ಜೀಪ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಪೃಥ್ವಿ ಸಾನಿಕಂ, ಗ್ರೇಡ್2 ತಹಶೀಲ್ದಾರ್ ಶಶಿಧರಯ್ಯ, ತಾಪಂ ಇಓ ರವಿ, ಪೂಜಾ, ಮಲೇಬೆನ್ನೂರು ಪುರಸಭೆ ಅಧಿಕಾರಿ ರವಿ, ಚುನಾವಣೆ ಸಿಬ್ಬಂದಿಗಳಾದ ಸೋಮಶೇಖರ್, ಉಮೇಶ್, ಅಶೋಕ್, ಮಂಜುನಾಥ್, ಶಿಕ್ಷಕ ಬಿ.ಬಿ. ರೇವಣನಾಯ್ಕ್, ಪೊಲೀಸ್ ಅಧಿಕಾರಿಗಳಾದ ಸಿಪಿಐ ದಯಾನಂದ, ಗೌಡಪ್ಪಗೌಡ, ಪಿಎಸ್‌ಐ ವೀಣಾ ಮಂಡ್ಯ, ರಾಜು, ಪ್ರಭು ಕೆಳಗಿನಮನೆ ಮತ್ತಿತರರು ಹಾಜರಿದ್ದರು.

## ಸಂಜೆ 6 ರವರೆಗೆ ಮತದಾನ

**(3ನೇ ಪುಟದಿಂದ)** ಯಾವುದೇ ಶಾಸಕರು, ಸಂಸದರು, ಸಚಿವರುಗಳು ಅಭ್ಯರ್ಥಿಗಳಿಗೆ ಏಜೆಂಟರು, ಮತದಾನ ಏಜೆಂಟರು, ಎಣಿಕೆ ಏಜೆಂಟರಾಗುವಂತಿಲ್ಲ. ಮತದಾನ ಕೇಂದ್ರದೊಳಗೆ ಮತಗಟ್ಟೆ ಅಧಿಕಾರಿಗಳಿಗೆ, ಚುನಾವಣಾ ಕರ್ತವ್ಯ ನಿರತ ಅಧಿಕಾರಿಗಳಿಗೆ, ಚುನಾವಣಾ ಆಯೋಗದಿಂದ ನೇಮಕವಾದ ಅಧಿಕಾರಿಗಳಿಗೆ, ಅಭ್ಯರ್ಥಿಗಳ ಒಬ್ಬ ಏಜೆಂಟರಿಗೆ, ಅಂಧ, ದುರ್ಬಲ ಮತದಾರರ ಒಬ್ಬ ಸಹಾಯಕರಿಗೆ ಮಾತ್ರ ಅವಕಾಶ ಇರುತ್ತದೆ. ದೂರು, ಸಹಾಯಕ್ಕಾಗಿ ಟೋಲ್‌ಫ್ರೀ ಬಳಸಿ 1950 ಬಳಸುವಂತೆ ಅವರು ಹೇಳಿದ್ದಾರೆ.

**ಪ್ರವಾಸಿ ತಾಣಗಳು ಬಂದ್;** ಮೇ 10 ವಿಧಾನಸಭಾ ಚುನಾವಣಾ ಮತದಾನ ನಡೆಯಲಿರುವು ದರಿಂದ ದಾವಣಗೆರೆ ಗ್ಲಾಸ್‌ಹೌಸ್ ಮತ್ತು ಶಾಂತಿ ಸಾಗರದಲ್ಲಿ ಯಾವುದೇ ಪ್ರವಾಸಿಗರಿಗೆ ಅವಕಾಶ ಇರುವುದಿಲ್ಲ. ಮತದಾನದ ಪ್ರಯುಕ್ತ ಮುಚ್ಚಲಾಗಿ ರುತ್ತದೆ. ನಂತರ ಎಂದಿನಂತೆ ಲಭ್ಯವಿರಲಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

## 4.5 ಪಟ್ಟು ಹೆಚ್ಚು ಸರಕುಗಳ ವಶ

**375 ಕೋಟಿ ರೂ. ಮೌಲ್ಯದ ಮದ್ಯ, ಮಾದಕ ಹಾಗೂ ಉಚಿತ ಕೊಡುಗೆಗಳ ಪತ್ತೆ**

**(3ನೇ ಪುಟದಿಂದ)** ವೆಚ್ಚ ಸೂಕ್ಷ್ಮ ಎಂದು ಗುರುತಿಸಲಾಗಿದೆ.

ಎಲ್ಲಾ ಜಿಲ್ಲೆಗಳಲ್ಲಿ ಗಣನೀಯ ಪ್ರಮಾಣದ ಮದ್ಯ ವಶಪಡಿಸಿಕೊಳ್ಳಲಾಗಿದೆ. ಅಲ್ಲದೇ, ಈ ಬಾರಿ ದೊಡ್ಡ ಪ್ರಮಾಣದಲ್ಲಿ ಉಚಿತ ಕೊಡುಗೆಗಳನ್ನು ವಶಪಡಿಸಿಕೊಂಡಿರುವುದು ವಿಶೇಷವಾಗಿದೆ. ಕಲಬುರಗಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸೀರೆ ಹಾಗೂ ಆಹಾರದ ಕಿಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬೈಲಹೊಂಗಲ ಹಾಗೂ ಕುಣಿಗಲ್ ಮತ್ತಿತರೆ ಕಡೆಗಳಲ್ಲಿ ಕುಕ್ಕರ್ ಹಾಗೂ ಅಡುಗೆ ಮನೆ ಉಪಕರಣಗಳ ವಶಪಡಿಸಿಕೊಳ್ಳಲಾಗಿದೆ ಎಂದು ಆಯೋಗದ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಜಿಲ್ಲೆಯಲ್ಲಿ ಮತದಾನಕ್ಕೆ ಸಕಲ ಸಿದ್ಧತೆ

**(3ನೇ ಪುಟದಿಂದ)** ಬಂದಿವೆ. ಅವುಗಳ ಬಳಕೆ, ಮಾಕ್‌ಪೋಲ್, ವಿವಿಪ್ಯಾಟ್ ಬಳಕೆ, ಸುರಕ್ಷಿತ ಸಾಗಣೆ ಸೇರಿದಂತೆ, ಎಲ್ಲ ಅಗತ್ಯ ಮಾಹಿತಿ ನೀಡಲಾಗಿದೆ. ಮತಯಂತ್ರಗಳ ಸಾಗಾಟದ ವೇಳೆ ಸಶಸ್ತ್ರ ಪೊಲೀಸ್ ಸಿಬ್ಬಂದಿಯ ಭದ್ರತೆ ಇರಲಿದೆ ಎಂದರು.

ಜಿಲ್ಲೆಯಲ್ಲಿ ಒಟ್ಟು 16 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 7 ಸಖಿ, 7 ವಿಶೇಷ ಚೇತನ, ಒಂದು ಬಂಜಾರ ಸಂಸ್ಕೃತಿ ಬಿಂಬಿಸುವ ಹಾಗೂ ಇನ್ನೊಂದು ಯುವ ಅಧಿಕಾರಿಗಳೇ ನಿರ್ವಹಿಸುವ ಮತಗಟ್ಟೆ ಇದೆ ಎಂದು ಹೇಳಿದರು.

ಜಿಲ್ಲೆಯಲ್ಲಿ 338 ಕ್ರಿಟಿಕಲ್ ಬೂತ್‌ಗಳನ್ನು ಗುರುತಿಸಲಾಗಿದ್ದು, ಇಲ್ಲಿಗೆ ಅಗತ್ಯ ಭದ್ರತಾ ಸಿಬ್ಬಂದಿ ಯನ್ನು ನೇಮಿಸಲಾಗಿದೆ ಎಂದು ಕಾಪಶಿ ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಅರುಣ್ ಮಾತನಾಡಿ, 7 ವಿಧಾನಸಭಾ ಕ್ಷೇತ್ರಗಳಲ್ಲಿ 4,099 ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗಿದೆ. ಸಿವಿಲ್ ಪೊಲೀಸರು, ಕೆಎಸ್‌ಆರ್‌ಪಿ, ಕೇಂದ್ರೀಯ ಸಶಸ್ತ್ರ ಪಡೆಗಳೂ ಇದರಲ್ಲಿ ಸೇರಿವೆ ಎಂದರು.

144ನೇ ಸೆಕ್ಷನ್ ಕಠಿಣವಾಗಿ ಜಾರಿಗೆ ತರಲಾಗಿದೆ. ಸಂಪೂರ್ಣ ಸುರಕ್ಷಿತ ಹಾಗೂ ಮುಕ್ತ ಮತದಾನಕ್ಕಾಗಿ ವ್ಯವಸ್ಥೆ ಮಾಡಲಾಗಿದೆ ಎಂದವರು ತಿಳಿಸಿದರು.

## ಮತಗಟ್ಟೆಗಳ ಕಡೆ ಸಿಬ್ಬಂದಿ ರವಾನೆ

**(3ನೇ ಪುಟದಿಂದ)** ಜಗಳೂರು ಸರ್ಕಾರಿ ಪದವಿ ಪೂರ್ವ ಕಾಲೇಜು, ಹರಿಹರದ ಸೇಂಟ್ ಮೇರೀಸ್ ಕಾನ್ವೆಂಟ್ ಸ್ಕೂಲ್, ಚನ್ನಗಿರಿಯ ಶಿವಲಿಂಗೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಹೊನ್ನಾಳಿಯ ಗಂಗಮ್ಮ ವೀರಭದ್ರಶಾಸ್ತ್ರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಮಸ್ಟರಿಂಗ್ ಕೇಂದ್ರಗಳಾಗಿ ಬಳಸಿಕೊಳ್ಳಲಾಗಿತ್ತು.

ಬಿರು ಬಿಸಿಲಿನಲ್ಲಿ ಸಿಬ್ಬಂದಿ ಮತ ಯಂತ್ರ, ನಿಯಂತ್ರಣ ಯಂತ್ರ, ವಿವಿಪ್ಯಾಟ್, ಮತ ಪತ್ರಗಳ ಲಕೋಟೆ, ಭೂತ ಕನ್ನಡಿ ಇಂಕ್ ಪ್ಯಾಡ್, ಮೆಡಿಕಲ್ ಕಿಟ್ ಇತ್ಯಾದಿಗಳನ್ನು ಹೊತ್ತು ನಡೆದರು. ನಗರದಲ್ಲಿ ಸಂಜೆ ಸುರಿದ ಮಳೆ ತುಸು ತಂಪೆರೆಯಿತು.

ಮಸ್ಟರಿಂಗ್ ಕೇಂದ್ರಗಳಲ್ಲಿ ಮಧ್ಯಾಹ್ನ ಊಟದ ವ್ಯವಸ್ಥೆ ರುಚಿಯಾಗಿರಲಿಲ್ಲ ಎಂಬ ಆರೋಪಗಳು ಸಿಬ್ಬಂದಿಗಳಿಂದ ಕೇಳಿ ಬಂತು.

## ವಿವಿಧೆಡೆ ವಿಶೇಷ ಮತಗಟ್ಟೆಗಳ ಆಕರ್ಷಣೆ

**(3ನೇ ಪುಟದಿಂದ)** ಮತದಾರರನ್ನು ಆಕರ್ಷಿಸಲು ಮತ ಗಟ್ಟೆ ಕೇಂದ್ರಗಳನ್ನು ವಿವಿಧ ಮಾದರಿಗಳಲ್ಲಿ ಸಿಂಗಾರಗೊಳಿಸಲಾಗಿದೆ. ಅಲಂಕೃತ ಮತಗಟ್ಟೆಗಳು ಮತದಾರರನ್ನು ಕೈಬೀಸಿ ಕರೆಯುತ್ತಿವೆ. ವಿಶೇಷಚೇತನರ ಮತದಾನವನ್ನು ಪ್ರೋತ್ಸಾಹಿಸುವ ಸಲುವಾಗಿ ಅವರಿಗಾಗಿ ವಿಶೇಷಚೇತನರ ಮತಗಟ್ಟೆ ಸ್ಥಾಪಿಸಲಾಗಿದೆ. ವಿಶೇಷಚೇತನರ ಮತಗಟ್ಟೆಗ ಳನ್ನು ಆಕರ್ಷಣೀಯವಾಗಿ ಸಿಂಗರಿಸಲಾಗಿದೆ. ವಿಶೇಷ ಚೇತನರ ಮತಗಟ್ಟೆಗಳಲ್ಲಿ ಮತಗಟ್ಟೆ ಅಧಿಕಾರಿಯಿಂದ ಎಲ್ಲಾ ಸಿಬ್ಬಂದಿಗಳು ವಿಶೇಷಚೇತನರಾಗಿರುತ್ತಾರೆ. ಇವರಿಂದಲೇ ಮತಗಟ್ಟೆಯನ್ನು ನಿರ್ವಹಿಸಲಾಗುತ್ತದೆ.

ಮಹಿಳಾ ಮತದಾರಿಗಾಗಿ ತೆರೆಯಲಾಗಿರುವ ಸಖಿ ಮತಗಟ್ಟೆ ಗಳು ತಳಿರು-ತೋರಣ, ಪಿಂಕ್ ಬಲೂನ್‌ಗಳ ಅಲಂಕಾರ ದೊಂದಿಗೆ ಸಿಂಗಾರಗೊಂಡು ಮತದಾರರನ್ನು ಸ್ವಾಗತಿಸುತ್ತಿವೆ. ಯುವ ಮತದಾರರನ್ನು ಆಕರ್ಷಿಸಲು ಯುವ ಮತಗಟ್ಟೆ ಸ್ಥಾಪಿಸಲಾಗಿದೆ. ಪಾರಂಪರಿಕ ಮತಗಟ್ಟೆಗಳನ್ನೂ ಸ್ಥಾಪಿಸಲಾಗಿದೆ.

**ಸಖಿ, ವಿಶೇಷಚೇತನರ ಮತಗಟ್ಟೆಗೆ ಜಿಲ್ಲಾಧಿಕಾರಿ ಭೇಟಿ;** ಚನ್ನಗಿರಿ ಕ್ಷೇತ್ರದ ಸಂತೇಬೆನ್ನೂರಿನ ಮತಗಟ್ಟೆ ಸಂಖ್ಯೆ 34 ರಲ್ಲಿ ಸಖಿ ಮತಗಟ್ಟೆ ಮತ್ತು 36 ರಲ್ಲಿ ವಿಶೇಷಚೇತನರ ಮತಗಟ್ಟೆಯನ್ನು ಸ್ಥಾಪಿಸಲಾಗಿದೆ. ಇಲ್ಲಿಗೆ ಮಂಗಳವಾರ ಸಂಜೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು, ಅಚ್ಚುಕಟ್ಟಾಗಿ ನಿರ್ಮಿಸಲಾಗಿದ್ದು ಎಲ್ಲಾ ಮಹಿಳಾ ಸಿಬ್ಬಂದಿಗಳಿಂದಲೇ ಸಖಿ ಮತಗಟ್ಟೆಯನ್ನು ನಿರ್ವಹಿಸಲಾಗುತ್ತಿದೆ ಹಾಗೂ ವಿಶೇಷ ಚೇತನರ ಮತಗಟ್ಟೆಯಲ್ಲಿ ವಿಶೇಷಚೇತನ ಸಿಬ್ಬಂ ದಿಯಿಂದಲೇ ನಿರ್ವಹಿಸಲಾಗುತ್ತಿದ್ದು ಇವರ ಸಹಾಯಕ್ಕೆ ಬೇಕಾದ ಸಿಬ್ಬಂದಿ ನೆರವು ನೀಡಲು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರಾದ ಸುರೇಶ್ ಇಟ್ನಾಳ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಾಶ್ ಹಾಗೂ ವಿವಿಧ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಸರ್ಕಾರ ಅತಂತ್ರವೋ, ಸ್ವತಂತ್ರವೋ...

**(3ನೇ ಪುಟದಿಂದ)** ಸಮನ್ವಯದಿಂದ ಪ್ರಚಾರದಲ್ಲಿ ತೊಡಗಿಕೊಂಡಿರುವುದಾಗಿ ಬಿಂಬಿಸಿದರು.

ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಗಾಂಧಿ ಕುಟುಂಬದವರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಸಹ ರಾಜ್ಯದಲ್ಲಿ ವ್ಯಾಪಕ ಪ್ರಚಾರ ನಡೆಸಿದ್ದರು.

ಪಕ್ಷದ ಉನ್ನತ ನಾಯಕರು ರಾಜ್ಯದಲ್ಲಿ 99 ಸಭೆಗಳು ಹಾಗೂ 33 ರೋಡ್ ಶೋಗಳನ್ನು ನಡೆಸಿದ್ದಾರೆ.

ಇನ್ನೊಂದೆಡೆ ಆಡಳಿತಾರೂಢ ಬಿಜೆಪಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವೈಯಕ್ತಿಕ ವರ್ಚಸ್ಸಿನ ಮೂಲಕ ಆಡಳಿತ ವಿರೋಧಿ ಅಲೆಯನ್ನು ಎದುರಿಸಿ ಮತ್ತೆ ಅಧಿಕಾರಕ್ಕೆ ಬರುವ ಪ್ರಯತ್ನ ನಡೆಸಿದೆ.

ಡಬಲ್ ಇಂಜಿನ್ ಸರ್ಕಾರದ ಪ್ರತಿಪಾದನೆ ಮಾಡುತ್ತಿರುವ ಬಿಜೆಪಿ, ಮೋದಿ ಅವರ ವರ್ಚಸ್ಸನ್ನೇ ಹೆಚ್ಚಾಗಿ ಅವಲಂಬಿಸಿದ್ದು ಪ್ರಚಾರದ ವೇಳೆ ಕಂಡು ಬಂದಿತು. ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಮಾತ್ರ ಬಿಜೆಪಿ ಅಧಿಕಾರ ಹೊಂದಿದೆ. ಹೀಗಾಗಿ ರಾಜ್ಯವೇ ಬಿಜೆಪಿಗೆ ದಕ್ಷಿಣದ ಹೆಬ್ಬಾಗಿಲಾಗಿದೆ.

ಪ್ರಧಾನಿ ಮೋದಿ ರಾಜ್ಯದಲ್ಲಿ 19 ಸಾರ್ವಜನಿಕ ಸಭೆಗಳು ಹಾಗೂ 6 ರೋಡ್ ಶೋಗಳನ್ನು ನಡೆಸಿದ್ದರು. ಕೇಂದ್ರ ನಾಯಕರಾದ ಅಮಿತ್ ಷಾ, ಜೆ.ಪಿ. ನಡ್ಡಾ, ರಾಜನಾಥ್ ಸಿಂಗ್ ಹಾಗೂ ನಿರ್ಮಲಾ ಸೀತಾರಾಮನ್ ಅವರಲ್ಲದೇ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೂ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದರು.

## ಇಮ್ರಾನ್ ಖಾನ್ ಬಂಧನ

**(3ನೇ ಪುಟದಿಂದ)** ಘೋಷಣೆ ಕೂಗಿದ್ದಾರೆ.

ಲಾಹೋರ್‌ನಲ್ಲಿ ಖಾನ್ ಬೆಂಬಲಿಗರು ಕಾರ್ಪ್ಸ್ ಕಮಾಂಡರ್ ನಿವಾಸಕ್ಕೆ ನುಗ್ಗಿದ್ದಾರೆ. ಅಲ್ಲಿ ಕರ್ತವ್ಯದಲ್ಲಿ ನಿಯೋಜಿತರಾಗಿದ್ದ ಸೈನಿಕರು ಪ್ರತಿಭಟನಾಕಾರರನ್ನು ತಡೆಯುವ ಪ್ರಯತ್ನ ನಡೆಸಲಿಲ್ಲ.

ಪ್ರತಿಭಟನಾಕಾರರು ಪ್ರಮುಖ ರಸ್ತೆಗಳನ್ನು ಆಕ್ರಮಿಸಿಕೊಂಡ ಕಾರಣದಿಂದಾಗಿ ಲಾಹೋರ್ ದೇಶದ ಇತರೆ ಭಾಗಗಳ ಸಂಪರ್ಕ ಕಳೆದುಕೊಂಡಿದೆ.

ಸಿಂಧ್ ಪ್ರಾಂತ್ಯದ ಕರಾಚಿ ಹಾಗೂ ಹೈದರಾಬಾದ್, ಬಲೂಚಿಸ್ತಾನದ ಕ್ವೆಟ್ಟಾಗಳಲ್ಲೂ ಹಿಂಸಾತ್ಮಕ ಪ್ರತಿಭಟನೆಗಳು ನಡೆದಿವೆ.

87 ರಾಣೇಬೆನ್ನೂರು ವಿಧಾನಸಭಾ ಚುನಾವಣೆ-2023

ದಿನಾಂಕ: 10-5-2023 ನೇ ಬುಧವಾರದಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಡಾ|| ಹಂಡೆ ಮೋಹನ ಎಂಬ ನಾನು ಸ್ಪರ್ಧಿಸಿದ್ದೇನೆ. ನನ್ನ ಚಿಹ್ನೆಯಾದ 'ಸ್ಟೆತೋಸ್ಕೋಪ್' ದ ಗುರ್ತಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ ಪ್ರಚಂಡ ಬಹುಮತದಿಂದ ಆರಿಸಿ ತಂದು ನಿಮ್ಮ ಸೇವೆಗೆ ಅವಕಾಶ ಮಾಡಿಕೊಡಬೇಕೆಂದು ಸವಿನಯ ಪ್ರಾರ್ಥನೆ.



ಕ್ರಮ ಸಂಖ್ಯೆ : 11



ತಮ್ಮ ಸೇವಾಕಾಂಕ್ಷಿ
ಡಾ|| ಹಂಡೆ ಮೋಹನ

ಸಮೃದ್ಧ ವಿಕಾಸ - ಭ್ರಷ್ಟಾಚಾರ ಮುಕ್ತ ಆಡಳಿತಕ್ಕೆ ಮತ ನೀಡಿ

**SSM Residential Public School**
Pailwan Channabasappa Layout, P.B. Road near GMIT College, Davanagere-577006
**Navachethana public school**
Nagarakatte, Davanagere North

**WANTED TEACHERS**

Application are invited along with CVs, One Passport size Photograph, original marks card and one set Xerox Marks Card for the following vacant posts in the SSM Residential Public school. Minimum Qualification, Experience and grades offered are mentioned against each post.

**Interview date: Sunday 14.05.2023, Time : 11 A.M**
**Place :** SSM Residential Public School Pailwan Channabasappa Layout, P.B. Road near GMIT College, Davanagere-577006

| Sl.no | Post | Qualification |
|---|---|---|
| 1 | Assistant Teacher 2 (Female) | PUC / NTC |
| 2 | Assistant Teacher 2 (Female) | PUC / B.A. D.Ed |
| 3 | Assistant Hindi Teacher - 2 | B.A / M.A. B.Ed |
| 4 | Assistant History/English 2 (English major) | B.A / M.A. B.Ed |
| 5 | Maths/Science Teacher - 2 | B.Sc / M.Sc. B.Ed, B.E |
| 6 | P.E Teacher - 2 | B.A, B.Com, B.P.Ed |

**Contact: 87225 17777, 82968 08005**

# ಮಾಯಕೊಂಡ ವಿಧಾನಸಭಾ ಕ್ಷೇತ್ರ ಚುನಾವಣೆ-2023





ಮಾನ್ಯ ಮತದಾರ ಬಂಧುಗಳೇ,
ದಿನಾಂಕ 10-05-2023ರ ಬುಧವಾರ ನಡೆಯಲಿರುವ ಚುನಾವಣೆಗೆ ಮಾಯಕೊಂಡ ವಿಧಾನಸಭಾ ಕ್ಷೇತ್ರದ **'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ'** ಯಾಗಿ ನಾನು ಸ್ಪರ್ಧಿಸಿರುತ್ತೇನೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ, ಮೂಲಭೂತ ಸೌಲಭ್ಯ ಹಾಗೂ ಜನಪರ ಆಡಳಿತಕ್ಕಾಗಿ, ಕಾಂಗ್ರೆಸ್ ಪಕ್ಷದ **'ಹಸ್ತ'ದ ಗುರುತಿಗೆ** ತಮ್ಮ ಅಮೂಲ್ಯವಾದ ಮತ ನೀಡಿ ನನ್ನನ್ನು ಅತ್ಯಧಿಕ ಮತಗಳ ಮೂಲಕ ಗೆಲ್ಲಿಸಿ ತಮ್ಮ ಸೇವೆಗೆ ಅವಕಾಶ ಕಲ್ಪಿಸಿಕೊಡಬೇಕಾಗಿ ಪ್ರಾರ್ಥನೆ.

ತಮ್ಮ ಸೇವಾಕಾಂಕ್ಷಿ
**ಕೆ.ಎಸ್. ಬಸವಂತಪ್ಪ**

## "ಹಸ್ತಕ್ಕೆ ಮತ ದೇಶಕ್ಕೆ ಹಿತ"

**3 ಕೆ.ಎಸ್. ಬಸವಂತಪ್ಪ**

ಮತದಾನದ ದಿನಾಂಕ : 10-05-2023ನೇ ಬುಧವಾರ ಬೆಳಿಗ್ಗೆ 7-ರಿಂದ ಸಂಜೆ 6-00 ರವರೆಗೆ



## ಮತದಾನ ನಮ್ಮ ಹಕ್ಕು, ತಪ್ಪದೇ ಮತದಾನ ಮಾಡಿ.

ಗ್ರಾಹಕರ ಸೇವೆಯನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ

# ನಿಮ್ಮ 'ರವಿತೇಜ' ದಲ್ಲಿ





10% OFF + 10% OFF

**ಮತದಾನ ಮಾಡಿ, ಡಿಸ್ಕೌಂಟ್* ಪಡೆಯಿರಿ.**
-- ಇಂದು ಮಾತ್ರ --

ಇಂದೇ ಭೇಟಿ ಕೊಡಿ...

# Raviteja
Textiles

**Silk Sarees | Mens Wear | Kids Wear**

**ರವಿತೇಜ ಗಾರ್ಮೆಂಟ್ಸ್**
ಚಾಮರಾಜಪೇಟೆ, ಫೋ : 98800 32999

**ರವಿತೇಜ'ಸ್**
ವಿದ್ಯಾನಗರ, ಫೋ : 98803 82611

**ರವಿತೇಜ ಫ್ಯಾಷನ್**
ಚೇತನ ಹೋಟೆಲ್ ರಸ್ತೆ, ಫೋ : 95916 33871

**ರವಿತೇಜ ಸಿಲ್ಕ್ಸ್ ಅಂಡ್ ಸ್ಯಾರೀಸ್**
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ. ಫೋ : 98444 66844, 97419 53993



Sapthagiri Trust (R.)

# SAPTHAGIRI VIDYALAYA

Chigateri Layout, Kunduwada Road, Davanagere-577006

## HEARTY CONGRATULATIONS TO ALL THE SSLC TOPPERS 2023



ASMITHA S SHETTAR
614/625
98.24%

| | | | | | | | | |
|---|---|---|---|---|---|---|---|---|
| PAVANKUMAR G 96.64% | NIKHITHA R P 96.16% | SANJANA M 95.36% | RAKSHITHA K C 94.72% | DHANUSH A B 94.24% | HARSHITHA METI 92.96% | AISHWARYA S 89.92% | VIJAYKUMAR R 89.76% | K VIKAS 88.80% |
| ABHINAYA T 88.32% | SAI ABHIRAM 88.16% | PRAJWAL H 88.00% | D R PRAJWAL 87.84% | SANGEETHA 87.36% | DEEKSHITHA 85.76% | AKASH B H 85.12% | NAGARAJ H D 84.16% | ANNESH B 84.00% |
| SANJANA B R 84.00% | PUNITH S 83.68% | PREM S 83.36% | SIDDESH J R 83.04% | ABHISHEK K S 82.56% | POOJA S 82.04% | UMAMAHESH 81.92% | VINAYKUMAR 80.96% | CHANDAN D R 80.48% |
| SIDDARATH V 80.48% | KAVITHA A H 80.00% | LINGARAJ H 80.00% | R P SACHIN 80.00% | NEELESH T N 80.00% | | | | |

SCHOOL RESULT
**100%**

## ADMISSIONS OPEN
FOR PLAY GROUP, LKG, UKG
and 1st STD TO 1st PUC

## SAPTHAGIRI PU COLLEGE
LAND OF OPPORTUNITY

JEE RESULT 2023



PUNITH KUMAR H
ALL INDIA RANK
1753

COURSES OFFERED
**1ST PUC**
P.C.M.B and P.C.M.Cs
KCET NEET JEE

Contact: 7406126006, 9620250067, 9741113392, 9606648777


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte